ವಿಜಯಪುರ | ಸಂಪುಟ 02 | ಸಂಚಿಕೆ 50 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ

Udayarashmi Kannada Daily


ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com | RNI NO: KARKAN/2023/86203 | ಶುಕ್ರವಾರ, ಏಪ್ರಿಲ್ 12, 2024



"ರಾಜ್ಯದ 54 ಲಕ್ಷ ರೈತರು ಪಿಎಂ ಕಿಸಾನ್ ಸಮ್ಮಾನ್ ಯೋಜನೆಯಡಿ ಪ್ರತಿ ವರ್ಷ 6,000 ರೂ.ಗಳನ್ನು ಪಡೆಯುತ್ತಿದ್ದಾರೆ. ತಾವು ಸಿಎಂ ಆಗಿದ್ದಾಗ ಅದಕ್ಕೆ 4,000 ರೂ. ನೀಡಲಾಗುತಿತ್ತು. ಅದನ್ನೀಗ ಕಾಂಗ್ರೆಸ್ ಸರ್ಕಾರ ನಿಲ್ಲಿಸಿರುವುದು ಅದು ದಿವಾಳಿಯಾಗಿದೆ ಎಂಬುದನ್ನು ತೋರಿಸುತ್ತದೆ."

– ಬಿ.ಎಸ್.ಯಡಿಯೂರಪ್ಪ
ಮಾಜಿ ಮುಖ್ಯಮಂತ್ರಿಗಳು

### ಮಾಹಿತಿ ಹಕ್ಕು ಕಾಯಿದೆ ಅಡಿ ನೀಡಲಾದ ಎರಡು ವಿನಾಯಿತಿ ಷರತ್ತುಗಳನ್ನು ಉಲ್ಲೇಖಿಸಿ ಮಾಹಿತಿ ನಿರಾಕರಿಸಿದ ಬ್ಯಾಂಕ್

# ಚುನಾವಣಾ ಬಾಂಡ್‌ಗಳ ವಿವರ ನೀಡಲು SBI ನಕಾರ

ನವದೆಹಲಿ: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್ ಬಿಐ) ಆರ್ ಟಿಐ ಅಡಿಯಲ್ಲಿ ಚುನಾವಣಾ ಬಾಂಡ್ ಗಳ ವಿವರಗಳನ್ನು ನೀಡುವುದಕ್ಕೆ ನಿರಾಕರಿಸಿದೆ. ದಾಖಲೆಗಳು ಚುನಾವಣಾ ಆಯೋಗದ ವೆಬ್ ಸೈಟ್ ನಲ್ಲಿದ್ದು, ಸಾರ್ವಜನಿಕವಾಗಿ ಲಭ್ಯವಿದ್ದರೂ ವಿಶ್ವಾಸಾರ್ಹ ಆಧಾರದಲ್ಲಿ ವೈಯಕ್ತಿಕ ಮಾಹಿತಿ ಇರುವ ಕಾರಣ ಅದನ್ನು ಆರ್ ಟಿಐ ನಲ್ಲಿ ನೀಡಲಾಗುವುದಿಲ್ಲ ಎಂದು ಹೇಳಿದೆ.





ಚುನಾವಣಾ ಬಾಂಡ್‌ಗಳ ಯೋಜನೆ "ಅಸಂವಿಧಾನಿಕ ಮತ್ತು ಸ್ಪಷ್ಟವಾಗಿ ಅನಿಯಂತ್ರಿತವಾಗಿದೆ" ಎಂಬುದನ್ನು ಪರಿಗಣಿಸಿದ ಸುಪ್ರೀಂ ಕೋರ್ಟ್, ಏಪ್ರಿಲ್ 12, 2019 ರಿಂದ ಖರೀದಿಸಿದ ಬಾಂಡ್‌ಗಳ ಸಂಪೂರ್ಣ ವಿವರಗಳನ್ನು ಚುನಾವಣಾ ಆಯೋಗಕ್ಕೆ ಒದಗಿಸುವಂತೆ ಫೆಬ್ರವರಿ 15 ರಂದು ಎಸ್‌ಬಿಐಗೆ ನಿರ್ದೇಶನ ನೀಡಿತ್ತು ಅಷ್ಟೇ ಅಲ್ಲದೇ ಚುನಾವಣಾ ಆಯೋಗ ತನ್ನ ವೆಬ್‌ಸೈಟ್‌ನಲ್ಲಿ ಚುನಾವಣಾ ಬಾಂಡ್ ಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಮಾರ್ಚ್ 13 ರಂದು ಪ್ರಕಟಿಸಬೇಕೆಂದು ಹೇಳಿತ್ತು.


ಮಾರ್ಚ್ 11 ರಂದು, ಗಡುವಿನ ವಿಸ್ತರಣೆಯನ್ನು ಕೋರಿ ಎಸ್‌ಬಿಐ ಸಲ್ಲಿಸಿದ ಅರ್ಜಿಯನ್ನು ನ್ಯಾಯಾಲಯವು ವಜಾಗೊಳಿಸಿತ್ತು. ಆರ್‌ಟಿಐ ಕಾರ್ಯಕರ್ತ ಕಮೋಡೋರ್ (ನಿವೃತ್ತ) ಲೋಕೇಶ್ ಬಾತ್ರಾ ಮಾರ್ಚ್ 13 ರಂದು ಎಸ್‌ಬಿಐನ್ನು ಸಂಪರ್ಕಿಸಿ, ಸುಪ್ರೀಂ ಕೋರ್ಟ್‌ನ ಆದೇಶದ ನಂತರ ಇಸಿಗೆ ಒದಗಿಸಿದಂತೆ ಡಿಜಿಟಲ್ ರೂಪದಲ್ಲಿ ಚುನಾವಣಾ ಬಾಂಡ್‌ಗಳ ಸಂಪೂರ್ಣ ಡೇಟಾವನ್ನು ಕೋರಿದರು.

ಮಾಹಿತಿ ಹಕ್ಕು (ಆರ್‌ಟಿಐ) ಕಾಯಿದೆ ಅಡಿಯಲ್ಲಿ ನೀಡಲಾದ ಎರಡು ವಿನಾಯಿತಿ ಷರತ್ತುಗಳನ್ನು ಉಲ್ಲೇಖಿಸಿ ಬ್ಯಾಂಕ್ ಮಾಹಿತಿಯನ್ನು ನಿರಾಕರಿಸಿದೆ.

### ರಾಜ ನುಡಿ

ಕೈಯಲ್ಲಿ ಹಿಡಿಯಲಾಗದ ಸೂರ್ಯನ ಕಿರಣಗಳು ಕೆಳಗೆ ಹರಿಯುವ ನೀರನ್ನು ಹೇಗೆ ಮೇಲೆತ್ತಿ ಮಳೆಗೈಯಬಲ್ಲವೋ, ಕಷ್ಟದಲ್ಲಿರುವ ಜೀವಕ್ಕೆ ನಾವು ಕೊಡಮಾಡುವ ಸಾಂತ್ವನ, ಪ್ರೋತ್ಸಾಹ, ಧೈರ್ಯಗಳು ಕಠಿಣ ಪರಿಸ್ಥಿತಿಗಳಿಂದ ಅವರನ್ನು ಮೇಲೆತ್ತಬಲ್ಲವು..

–ಡಾ. ರಾಜಶೇಖರ ನಾಗೂರ



### ವಚನ ಚಿಂತನ 353

*ಅನ್ಯದೈವವ ಮನದಲ್ಲಿ ನೆನೆಯಲಾಗದು,*
*ಅನ್ಯದೈವವ ಮಾತನಾಡಲಾಗದು.*
*ಅನ್ಯದೈವದ ಪೂಜೆಯ ಮಾಡಲಾಗದು.*
*ಸ್ಥಾವರಲಿಂಗಕ್ಕೆರಗಲಾಗದು.*
*ಆ ಲಿಂಗ ಪ್ರಸಾದವ ಕೊಳಲೆಂತೂ ಬಾರದು.*
*ಇಷ್ಟು ನಾಸ್ತಿಯಾದರೆ ಆತ ಅನ್ಯದೈವವ ಬಿಟ್ಟು ಲಿಂಗವಂತನೆನಿಸಿಕೊಂಬನು.*
*ಇವರೊಳಗೆ ಅನುಸರಣೆಯ ಮಾಡಿಕೊಂಡು ನಡೆದನಾದೊಡೆ*
*ಅವಂಗೆ ಕುಂಭಿಪಾತಕ ನಾಯಕನರಕ ತಪ್ಪದು*
*ಕಾಣಾ ಕೂಡಲಚೆನ್ನಸಂಗಯ್ಯ.*

ನಾವು ನಂಬಿರುವ ಆಕಾರದ ದೇವರು ದೇವರಲ್ಲ, ದೇವ ಎನ್ನುವುದು ಒಂದು ಶಕ್ತಿ ಮಾತ್ರ ಅದು ನಮ್ಮ ಬುದ್ದಿಯ ಪರಿಮಿತಿಯಲ್ಲಿ ಸಿಕ್ಕಿರುವುದಕ್ಕಿಂತಲೂ ಅಗಾಧವಾಗಿದೆ, ಅದನ್ನು ಒಂದು ಸ್ಥಳದಲ್ಲಿ ಅಥವಾ ವಸ್ತುವಿನಲ್ಲಿ ಬಚ್ಚಿಟ್ಟಿರುವೆವು ಎಂಬುದು ತುಂಬಾ ಹಾಸ್ಯಸ್ಪದ. ಅದನ್ನು ಅರಿಯಲು ಶರಣರು ಇಷ್ಟ ಲಿಂಗವೆಂಬ ಸಾಧನವನ್ನು ನೀಡಿರುವರು, ಈ ಸುಲಭ ಸಾಧನದ ಮೂಲಕ ದೈವಸಾಕ್ಷಾತ್ಕಾರ ಸಾದ್ಯವೆಂಬುದನ್ನು ಪ್ರಾಯೋಗಿಕವಾಗಿ ತಿಳಿಸಿದಾಗ್ಯೂ ಅನೇಕರು ಮತ್ತೆ ಹುಸಿ ದೈವದೆಡೆಗೆ ಮನಹರಿದವ ರನ್ನು ಅದರಿಂದ ವಿಮುಖಗೊಳಿಸುವ ನಿಟ್ಟಿನಲ್ಲಿ ಚೆನ್ನಬಸವಣ್ಣನವರು ಕೈಗೊಂಡ ಕ್ರಮವನ್ನು ಈ ವಚನ ವಿವರಿಸುತ್ತದೆ. ಇಲ್ಲಿ ಚೆನ್ನಬಸವಣ್ಣನವರು ಲಿಂಗವಂತನಾದವನ ಇರುವಿಕೆಯನ್ನು ಸ್ಪಷ್ಟಪಡಿಸಿದ್ದಾರೆ. ಅದೆಂದರೆ ಅನ್ಯದೈವಕ್ಕೆ ಎರಗದಿರುವುದು, ಸ್ಥಾವರಲಿಂಗ ಪೂಜಿಸದಿರುವುದು, ಸ್ಥಾವರಲಿಂಗದ ಪ್ರಸಾದ ಸೇವಿಸದಿರುವುದು "ಇಷ್ಟು ನಾಸ್ತಿಯಾದರೆ ಆತ ಅನ್ಯದೈವವ ಬಿಟ್ಟು ಲಿಂಗವಂತನೆನಿಸಿ ಕೊಂಬನು" ಇಂದು ಲಿಂಗಾಯತರೆನಿಸಿಕೊಳ್ಳುವವರು ಚೆನ್ನಬಸವಣ್ಣನವರ ಈ ವಚನದೊಂದಿಗೆ ಆತ್ಮ ವಿಮರ್ಶೆ ಮಾಡಿಕೊಳ್ಳಲು ಇದು ಸೂಕ್ತಕಾಲ. ಮಾತನಾಡದ ಮತ್ತು ನಮ್ಮ ಭಾವನೆಗೆ ಸ್ಪಂದಿಸದ ನಿರ್ಜೀವ ವಸ್ತುರೂಪದ ದೈವವನ್ನು ಶರಣರು ತಿರಸ್ಕರಿಸಿದ್ದಾರೆ. ಜಂಗಮ ತತ್ವಗಳನ್ನು ಮೈಗೂಡಿಸಿಕೊಂಡ ಚಲನಶೀಲ ಶರಣರ ಅಂಗವೇ ಲಿಂಗವೆಂದು ನಂಬಿರುವ ಶರಣರು ಅಂದು ಎಲ್ಲರಿಗೂ ಈ ಸುಲಭ ಸತ್ಯದ ಅರಿವನ್ನು ಮೂಡಿಸುತ್ತ ಲಿಂಗತತ್ವ ಅರಿತವನು ಹೇಗಿರಬೇಕು ಎಂಬುದನ್ನು ತಿಳಿಸಿದ್ದಾರೆ. ಒಂದು ವೇಳೆ ಇಬ್ಬಂಗಿತನದಿಂದ ಸ್ಥಾವರ ಮತ್ತು ಇಷ್ಟಲಿಂಗಗಳನ್ನು ಸಮಾನವಾಗಿ ಕಾಣುತ್ತಾ ಇದ್ದವರನ್ನು ಅವರದೇ ನಂಬಿಕೆಯು ನರಕದಲ್ಲಿ ಅದ್ದುವ ಎಂದು ಎಚ್ಚರಿಸಿರುವರು. ಅಂದು ಆದ್ಯಾತ್ಮದಲ್ಲಿ ಜಾರಿಗೆ ಇದ್ದ ಮೌಢ್ಯವನ್ನು ಹೊಡೆದೊಡಿಸಿ ವೈಚಾರಿಕತೆ ಯನ್ನು ಬಿತ್ತಿದ ಜಗತ್ತಿನ ಮೊದಲ ದಾರ್ಶನಿಕರು ಬಸವಾದಿ ಶರಣರು.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

## ಸಮಾಜ ಸುಧಾರಣೆ ಪಿತಾಮಹ ಜ್ಯೋತಿಬಾ ಪುಲೆ

ಉದಯರಶ್ಮಿ ನ್ಯೂಸ್

ಬಸವನಬಾಗೇವಾಡಿ: ಪಟ್ಟಣದ ನಾಗೂರ ರಸ್ತೆಯಲ್ಲಿರುವ ಬಸವನಕಟ್ಟೆ ಸಮೀಪ ಮಾಳಿ ಸಮಾಜ ಬಾಂಧವರು ಗುರುವಾರ ಮಹಾತ್ಮ ಜ್ಯೋತಿಬಾ ಪುಲೆ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಮಹಾತ್ಮ ಜ್ಯೋತಿಬಾ ಪುಲೆ ಅವರ 197 ನೇ ಜಯಂತಿಯನ್ನು ಆಚರಿಸಿದರು.

ಈ ಸಂದರ್ಭದಲ್ಲಿ ಮಾಳಿ ಸಮಾಜ ಯುವ ಮುಖಂಡ ಜಟ್ಟಿಂಗರಾಯ ಮಾಲಗಾರ ಮಾತನಾಡಿ, ದೇಶದಲ್ಲಿ ಶಿಕ್ಷಣದ ಮಹತ್ವ ಗುರುತಿಸುವಲ್ಲಿ ಜ್ಯೋತಿಬಾ ಪುಲೆ ಅವರು ನೀಡಿದ ಕೊಡುಗೆ ಅನನ್ಯ ಮತ್ತು ಶ್ರೇಷ್ಠವಾಗಿದೆ. ಧರ್ಮ, ಪಂಥ, ಸಂಪ್ರದಾಯ ಮೊದಲಾದ ಸಂಕುಚಿತ ಭಾವನೆಗಳಿಗೆ ಮರುಳಾಗದೇ ಮಾನವ ಧರ್ಮವನ್ನು ಅಂಗೀಕರಿಸಬೇಕು ಎಂದು ಹೇಳಿದ್ದರು. ಇಂತಹ ಮಹನೀಯರ ಜೀವನವನ್ನು ಯುವಜನಾಂಗ ಅರಿತುಕೊಳ್ಳಬೇಕೆಂದರು.

ಸಾಮಾಜಿಕ ಕ್ರಾಂತಿಕಾರಿ ಹೋರಾಟಗಾರರಾಗಿ ಜೋತಿಬಾ ಪುಲೆ ಅವರು ಸಮಾಜ ಸುಧಾರಕರಾಗಿ ಸಮಾನತೆಯ ಹರಿಕಾರರಾಗಿ ದೀನದಲಿತ ಹಿಂದುಳಿದ ಸೇರಿದಂತೆ ಎಲ್ಲ ವರ್ಗಗಳ ಜನರ ಅಭಿವೃದ್ಧಿಗೆ ಹಗಲಿರುಳು ಶ್ರಮಿಸಿದ ಧೀಮಂತ ಹೋರಾಟಗಾರರಾಗಿ ಇತಿಹಾಸ ಪುಟದಲ್ಲಿ ದಾಖಲಾಗಿದ್ದಾರೆ. ಇವರು ಸ್ಥಾಪಿಸಿದ ಸತ್ಯ ಶೋಧಕ ಸಮಾಜ ಸಂಘವು ಜಾತಿಗಳ ಮೇಲು–ಕೀಳು ಭಾವನೆ, ಶೂದ್ರ ಭಾವನೆ ಹೋಗಲಾಡಿಸುವ ನಿಟ್ಟಿನಲ್ಲಿ ಸಾಕಷ್ಟು ಶ್ರಮಿಸಿ ಸಾಮಾಜಿಕ ಚೌಕಟ್ಟನ್ನು ತೀವ್ರ ಬದಲಾಯಿಸಲು ಸಾಕಷ್ಟು ಕಾರ್ಯನಿರ್ವಹಿಸಿತು. ಇಂತಹ ಮಹನೀಯರ ಆದರ್ಶ ಎಂದಿಗೂ ಪ್ರಸ್ತುತವಾಗಿದೆ ಎಂದರು.

ಈ ಸಂದರ್ಭದಲ್ಲಿ ಸಂಗು ಮಾಲಗಾರ, ಪಾವಡೆಪ್ಪ ಮಾಲಗಾರ, ಸಿದ್ದಣ್ಣ ಕಲ್ಲೂರ, ಅಪ್ಪುಶ ಮಾಲಗಾರ, ಮುತ್ತು ಮಾಲಗಾರ, ಸಂಜು ಪವಾರ, ಈರಣ್ಣ ಮಠಪತಿ, ಮಂಜು ಮಾಲಗಾರ, ಸಂಗಪ್ಪ ತೋಟದ, ರವಿ ಮಾಲಗಾರ, ರಮೇಶ ಮಾಲಗಾರ ಇತರರು ಇದ್ದರು.

## ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡ ಸಚಿವ ಪಾಟೀಲ



ಉದಯರಶ್ಮಿ ನ್ಯೂಸ್

ವಿಜಯಪುರ: ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ರಂಜಾನ್ ಅಂಗವಾಗಿ ಇಂದು ಗುರುವಾರ ನಗರದಲ್ಲಿ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡರು.

ವಿಜಯಪುರ ನಗರದ ದಖನಿ ಶಾಹಿ ಈದ್ಗಾದಲ್ಲಿ ಬೆಳಿಗ್ಗೆ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡ ಸಚಿವರು, ರಾಜ್ಯದಲ್ಲಿ ಉತ್ತಮ ಮಳೆ, ಬೆಳೆ, ಶಾಂತಿ, ಸೌಹಾರ್ದತೆಗಾಗಿ ಪ್ರಾರ್ಥನೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಪ್ರಾರ್ಥನೆಯಲ್ಲಿ ಪಾಲ್ಗೊಂಡ ಜನರೊಂದಿಗೆ ಅವರು ಪರಸ್ಪರ ಶುಭಾಷಯ ವಿನಿಮಯ ಮಾಡಿದರು. ಅಲ್ಲದೇ, ಸಹೋದರತೆ, ಸಮಾನತೆ ಹಾಗೂ ಹಾಗೂ ಸರ್ವರ ಹಿತ ಬಯಸುವ ಈ ಹಬ್ಬ ಎಲ್ಲರಿಗೂ ಒಳಿತನ್ನುಂಟು ಮಾಡಲಿ ಎಂದು ಅವರು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ನಾನಾ ಮುಖಂಡರು ಉಪಸ್ಥಿತರಿದ್ದರು.

## ಬಿಟ್ಟಿ ಗ್ಯಾರಂಟಿ ಎನ್ನುತ್ತಿದ್ದವರಿಗೆ ವೇದಾಂತ್ ಉತ್ತರ :ಆಲಗೂರ

ಉದಯರಶ್ಮಿ ನ್ಯೂಸ್

ವಿಜಯಪುರ: ಕಲಾ ಮಾಧ್ಯಮದಲ್ಲಿ ರಾಜ್ಯಕ್ಕೆ ಮೊದಲ ರ್‍ಯಾಂಕ್ ಬಂದಿರುವ ಬಿಎಲ್‌ಡಿಇ ಸಂಸ್ಥೆಯ ಎಸ್.ಎಸ್. ಕಾಲೇಜಿನ ವಿದ್ಯಾರ್ಥಿ ವೇದಾಂತ ನಾವಿ ಭಾಗ್ಯಗಳ ನೆರವಿನಿಂದ ಬಂದ ಧೀಮಂತ ಹುಡುಗ ಎಂದು ಲೋಕಸಭೆ ಕಾಂಗ್ರೆಸ್ ಅಭ್ಯರ್ಥಿ ಪ್ರೊ.ರಾಜು ಆಲಗೂರ ಹೇಳಿದ್ದಾರೆ.



ಸಾಧನೆ ಮಾಡಿರುವ ಈ ಹುಡಗನನ್ನು ಸತ್ಕರಿಸಿ, ಆತನ ಭವಿಷ್ಯಕ್ಕೆ ಶುಭ ಹರಸಿ ಮಾತನಾಡಿದ್ದಾರೆ.

ಬಡ ಕುಟುಂಬದ ಈ ಪ್ರತಿಭಾವಂತನಿಗೆ ತಂದೆ ತೀರಿದ್ದಾನೆ. ತಾಯಿ ಮತ್ತು ಅಕ್ಕ ಇದ್ದಾರೆ. ಇವರ ಕುಟುಂಬ ನಿರ್ವಹಣೆಗೆ ಬಹಳ ಕಷ್ಟವಿತ್ತು. ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯರ ಸರಕಾರ ನೀಡಿದ ಭಾಗ್ಯ ಲಕ್ಷ್ಮಿ, ಗೃಹ ಲಕ್ಷ್ಮಿ ಯೋಜನೆಗಳೇ ಇವರಿಗೆ ಆಧಾರವಾಗಿದ್ದವು ಎಂದು ಸ್ವತಃ ವೇದಾಂತ್ ಉಪಕಾರ ಸ್ಮರಣೆಯಿಂದ ಹೇಳಿದ್ದಾನೆ. ಇದು ಜನಾನುರಾಗಿ, ಜನಪರ ಸರಕಾರದ ಸಾರ್ಥಕ್ಯವಾಗಿದೆ. ಕಷ್ಟ ಗೊತ್ತಿಲ್ಲದ, ಬಡವರ ಬವಣೆ ಅರಿಯದ ಜನ ಬಿಟ್ಟಿ ಭಾಗ್ಯ, ಪುಕ್ಕಟೆ ಗ್ಯಾರಂಟಿ ಎಂದು ಕುಹಕವಾಡಿದ್ದರು. ಅವರಿಗೆಲ್ಲ ಇಂತಹ ಉದಾಹರಣೆಗಳ ಮೂಲಕ ಉತ್ತರ ಸಿಗುತ್ತಲೇ ಇದೆ ಎಂದು ಆಲಗೂರ ಹೇಳಿದ್ದಾರೆ.

ವೇದಾಂತ್‌ನಂತಹ ಲಕ್ಷಾಂತರ ಕುಟುಂಬಗಳು ರಾಜ್ಯ ಸರಕಾರದ ಯೋಜನೆಗಳಿಂದ ನಿಟ್ಟುಸಿರು ಬಿಡುತ್ತಿವೆ. ಅನೇಕ ಪ್ರತಿಭೆಗಳು ನೆಮ್ಮದಿಯಿಂದ ಶಿಕ್ಷಣ ಪಡೆಯುತ್ತಿವೆ. ಈತ ವಸತಿ ನಿಲಯದಲ್ಲಿದ್ದು ಓದಿದ್ದಾನೆ. ಮುಂದೆಯೂ ಇಂತಹವರ ನೆರವಿಗೆ ಸರಕಾರ ಇರುತ್ತದೆ. ಮಾನ್ಯ ಸಚಿವರಾದ ಎಂ.ಬಿ. ಪಾಟೀಲರು ಕೂಡ ಇವನ ಮುಂದಿನ ಶಿಕ್ಷಣಕ್ಕೆ ಸಹಾಯ ನೀಡುವುದಾಗಿ ಹೇಳಿದ್ದು ಹೆಮ್ಮೆಯ ವಿಷಯ. ಗ್ಯಾರಂಟಿಗಳನ್ನು ಟೀಕಿಸುತ್ತಿದ್ದವರೇ ಈಗ ತಾವೇ ಗ್ಯಾರಂಟಿ ಜಪ ಮಾಡುತ್ತಿರುವುದು ವಿಪರ್ಯಾಸ ಎಂದಿದ್ದಾರೆ.

## ಮೋದಿ ಮತ್ತೆ ಪ್ರಧಾನಿಯಾಗುವುದು ನಿಶ್ಚಿತ :ಶಾಸಕ ಯತ್ನಾಳ

ಉದಯರಶ್ಮಿ ನ್ಯೂಸ್

ವಿಜಯಪುರ: ಕಳೆದ ಹತ್ತು ವರ್ಷಗಳ ಬಿಜೆಪಿ ಆಡಳಿತಾವಧಿಯಲ್ಲಿ ದೇಶದಲ್ಲಾದ ಬದಲಾವಣೆ, ಸಾಧನೆ, ಆರ್ಥಿಕ ಸುಧಾರಣೆ, ಜಾಗತಿಕ ಮನ್ನಣೆ, ಭ್ರಷ್ಟಾಚಾರ ರಹಿತ ಆಡಳಿತ ಜನಮನ ಗೆದ್ದು ಇಂದು ಮತ್ತೊಮ್ಮೆ ದೇಶಕ್ಕೆ ಮೋದಿ ಆಡಳಿತ ಬರಬೇಕೆಂಬುದು ಇಡಿ ದೇಶದ ಕೂಗಾಗಿದೆ. ವಿಶ್ವಮೆಚ್ಚಿದ ನಾಯಕ ನರೇಂದ್ರ ಮೋದಿಯವರು ಮತ್ತೊಮ್ಮೆ ಪ್ರಧಾನಿಯಾಗುವುದು ನಿಶ್ಚಿತ ಎಂದು ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಅವರು ಬಿಜೆಪಿ ಗೆಲುವಿನ ವಿಶ್ವಾಸ ವ್ಯಕ್ತಪಡಿಸಿದರು.



ನಗರದ ಕೆ.ಹೆಚ್.ಬಿ ಕಾಲೋನಿಯಲ್ಲಿ ಹಮ್ಮಿಕೊಂಡಿದ್ದ ಪಾಲಿಕೆಯ ಐದು ವಾರ್ಡ್ ಗಳ ವ್ಯಾಪ್ತಿಯ ಪಂಡಿತ ದೀನ್ ದಯಾಳ ಉಪಾಧ್ಯಾಯ ಮಹಾಶಕ್ತಿ ಕೇಂದ್ರಗಳಲ್ಲಿ ಬಿಜೆಪಿ ಅಭ್ಯರ್ಥಿ ರಮೇಶ ಜಿಗಜಿಣಗಿ ಅವರ ಪರ ಪ್ರಚಾರ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಕಾಂಗ್ರೆಸ್ಸಿಗರಿಗೆ ಮೋದಿ ಸರ್ಕಾರದ ವಿರುದ್ಧ ಆರೋಪ ಮಾಡಲು ಯಾವುದೇ ವಿಷಯ ಸಿಗುತ್ತಿಲ್ಲ. ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರದ ಭ್ರಷ್ಟಾಚಾರ ರಹಿತ ಆಡಳಿತ, ಅಭಿವೃದ್ಧಿ ಪರ್ವ ಕಾಂಗ್ರೆಸ್ಸಿಗರ ಬಾಯಿ ಕಟ್ಟಿ ಹಾಕಿದೆ. ದೇಶದಲ್ಲಿ ಮೊದಲು 400 ವಿಶ್ವವಿದ್ಯಾಲಯಗಳಿದ್ದವು, ಆದರೆ ಕಳೆದ 10 ವರ್ಷಗಳಲ್ಲಿ 1100 ವಿವಿಗಳಾಗಿವೆ. 41 ವಂದೇ ಭಾರತ್ ರೈಲುಗಳು ಓಡುತ್ತಿವೆ. ಮೆಡಿಕಲ್ ಕಾಲೇಜುಗಳ ಸಂಖ್ಯೆ 384 ರಿಂದ 700 ತಲುಪಿವೆ. ದೇಶದಲ್ಲಿ 74 ಇದ್ದ ವಿಮಾನ ನಿಲ್ದಾಣಗಳು ಇಂದು ವಿಜಯಪುರ ಸೇರಿ 154 ವಿಮಾನ ನಿಲ್ದಾಣಗಳಾಗಿವೆ. ಕೇವಲ 5 ನಗರಗಳಲ್ಲಿದ್ದ ಮೆಟ್ರೋ ಇಂದು 20 ನಗರಗಳಲ್ಲಿ ಮೆಟ್ರೋ ಸೇವೆ ಇದೆ. ಯುಪಿಎ ಅವಧಿಯಲ್ಲಿ 96 ಸಾವಿರ ಕಿ.ಮೀ ಇದ್ದ ರಾಷ್ಟ್ರೀಯ ಹೆದ್ದಾರಿ ಇಂದು 1.50 ಲಕ್ಷ ಕಿ.ಮೀ ನಷ್ಟು ಅಭಿವೃದ್ಧಿಯಾಗಿದೆ. 3.75 ಲಕ್ಷ ಕಿ.ಮೀ ಗ್ರಾಮೀಣ ರಸ್ತೆಗಳು ಅಭಿವೃದ್ಧಿಯಾಗಿವೆ. ಹೀಗೆ ಹತ್ತು ಹಲವು ಅಪರಿಮಿತ ಅಭಿವೃದ್ಧಿ ಕಾರ್ಯಗಳಾಗಿವೆ ಎಂದರು.

ನಮ್ಮ ವಿಜಯಪುರ ಲೋಕಸಭಾ ಕ್ಷೇತ್ರದ ಬಿಜೆಪಿಯಲ್ಲಿ ಯಾವುದೇ ಒಡಕ್ಕಿಲ್ಲ. ದೇಶದ ರಕ್ಷಣೆ, ಏಳ್ಗೆಗಾಗಿ ನಾವೆಲ್ಲರೂ ಒಗ್ಗಟ್ಟಿನಿಂದ ನಮ್ಮ ಅಭ್ಯರ್ಥಿ ರಮೇಶ ಜಿಗಜಿಣಗಿ ಅವರ ಚುನಾವಣೆ ಮಾಡುತ್ತಿದ್ದೇವೆ. ಜಿಲ್ಲೆಯ ಮತದಾರರು ಪ್ರಬುದ್ಧರಾಗಿದ್ದಾರೆ. ವಿಜಯಪುರ ನಗರ ಮತಕ್ಷೇತ್ರದಲ್ಲಿ ಬಿಜೆಪಿ 25 ಸಾವಿರ ಲೀಡ್ ಬರುವುದರಲ್ಲಿ ಯಾವುದೇ ಸಂಶಯವಿಲ್ಲ. ದೇಶದ ಭವಿಷ್ಯದ ಹಿತದೃಷ್ಟಿಯಿಂದ ಎಲ್ಲಾ ಜನತೆ ಮೇ 7 ರಂದು ಜರುಗುವ ಮತದಾನದಲ್ಲಿ ತಪ್ಪದೇ ಪಾಲ್ಗೊಂಡು ಬಿಜೆಪಿಗೆ ಮತ ಹಾಕಬೇಕೆಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಮತಯಾಚನೆ ಮಾಡಿದರು.

ಸಂಸದರು ಹಾಗೂ ವಿಜಯಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ರಮೇಶ ಜಿಗಜಿಣಗಿ ಮಾತನಾಡಿ, ಕಳೆದ 65 ವರ್ಷ ದೇಶವನ್ನಾಳಿದ ಕಾಂಗ್ರೆಸ್ ಪಕ್ಷ ದೇಶದ ಏಳ್ಗೆಗೆ ಏನನ್ನು ಮಾಡದೇ ಕೇವಲ ತಮ್ಮ ಪಕ್ಷ ಹಾಗೂ ತಮ್ಮ ಮನೆ ತುಂಬಿಸಿಕೊಳ್ಳುವ ಕೆಲಸ ಮಾಡಿದ್ದರು. ಆದರೆ ಕಳೆದ 10 ವರ್ಷಗಳಲ್ಲಿ ಬಿಜೆಪಿ ಮಾಡಿದ ಸಾಧನೆ ಇಡಿ ವಿಶ್ವವೇ ಮೆಚ್ಚಿಕೊಂಡಿದೆ. ಜಗತ್ತಿನ 5 ಬಲಿಷ್ಠ ಆರ್ಥಿಕ ರಾಷ್ಟ್ರವಾಗಿ ಅಭಿವೃದ್ಧಿ ಹೊಂದಿದೆ. ಬಿಜೆಪಿ ಅವಧಿಯಲ್ಲಿ ವಿಜಯಪುರ ಜಿಲ್ಲೆಯ ಅಭಿವೃದ್ಧಿಗೆ ಕೇಂದ್ರದಿಂದ 1 ಲಕ್ಷ ಕೋಟಿಯಷ್ಟು ಅನುದಾನ ತಂದಿದ್ದೇನೆ. ಜಿಲ್ಲೆಯ ಈ ಹಿಂದಿನ ಯಾವ ಕಾಂಗ್ರೆಸ್ ಸಂಸದರು ಮಾಡಲಾರದಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇನೆ. ಬರಗಾಲದಿಂದ ತತ್ತರಿಸಿರುವ ಜಿಲ್ಲೆಯ ಇಂಡಿ ಭಾಗದ ಸುಮಾರು76 ಹಳ್ಳಿಗಳಿಗೆ 120 ಕೋಟಿ ಅನುದಾನದಲ್ಲಿ ಶಾಶ್ವತ ಕುಡಿಯುವ ನೀರಿನ ಯೋಜನೆ ತಂದಿದ್ದೇನೆ. ನಮ್ಮ ಸರ್ಕಾರದ ಅವಧಿಯಲ್ಲಿ ರಾಷ್ಟ್ರೀಯ ಹೆದ್ದಾರಿಗಳು, ರೈಲ್ವೆ ವ್ಯವಸ್ಥೆ ಅಭಿವೃದ್ಧಿ, ವಿಮಾನ ನಿಲ್ದಾಣ ಹೀಗೆ ಹತ್ತು ಹಲವು ಜನಪರ ಕೆಲಸಗಳಾಗಿವೆ. ಇದು ನನ್ನ ಕಡೆಯ ಚುನಾವಣೆ. ಈ ಹಿಂದೆ ಮೋದಿಯವರು ಎರಡು ಬಾರಿ ಪ್ರಧಾನಿಯಾಗಲು ಜಿಲ್ಲೆಯ ಜನ ನನಗೆ ಕೈ ಎತ್ತಲು ಅವಕಾಶ ಮಾಡಿಕೊಟ್ಟಂತೆ ಮೋದಿಯವರಿಗಾಗಿ 3 ನೇ ಬಾರಿ ಕೈ ಎತ್ತಲು ಜನತೆ ನನಗೆ ಅವಕಾಶ ಮಾಡಿಕೊಂಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೇ ಇದು ನನ್ನ ಜೀವನದ ಕೊನೆಯಾಸೆ ಎಂದು ಸಂಸದ ರಮೇಶ ಜಿಗಜಿಣಗಿ ಭಾವುಕ ಮಾತುಗಳಾಡಿದರು.

ಈ ವೇಳೆ ಮುಖಂಡರಾದ ವಿವೇಕಾನಂದ ಡಬ್ಬಿ, ಪಾಲಿಕೆ ಸದಸ್ಯ ಹಾಗೂ ಬಿಜೆಪಿ ಜಿಲ್ಲಾ ಪ್ರ.ಕಾರ್ಯದರ್ಶಿ ಮಳುಗೌಡ ಪಾಟೀಲ, ನಗರ ಮಂಡಲ ಅಧ್ಯಕ್ಷ ಶಂಕರ ಹೂಗಾರ ಹಾಗೂ ಸುರೇಶ್ ಬಿರಾದಾರ್, ಬಸವರಾಜ್ ಬೈಚಬಾಳ, ಪಾಲಿಕೆ ಸದಸ್ಯರಾದ ಎಂ. ಎಸ್.ಕರಡಿ, ಪ್ರೇಮಾನಂದ ಬಿರಾದಾರ, ನಗರ ಮಂಡಲ ಮಹಿಳಾ ಮೋರ್ಚಾ ಅಧ್ಯಕ್ಷೆ ಲಕ್ಷ್ಮೀ ಕನ್ನೊಳ್ಳಿ, ರಾಹುಲ್ ಔರಂಗಬಾದ್, ಮಹೇಶ್ ಒಡೆಯರ, ಸುನಿಲ್ ಜೈನಾಪುರ, ಪ್ರಭು ಕೆಂಗಾರ, ಪ್ರವೀಣ್ ಕೂಡ್ಗಿ, ಪಾಪುಸಿಂಗ್ ರಜಪೂತ ಇತರರಿದ್ದರು.

## ಸಂಭ್ರಮದ ರಮಜಾನ್ ಈದ್ ಆಚರಣೆ

ಉದಯರಶ್ಮಿ ನ್ಯೂಸ್

ಚಿಮ್ಮಡ: ಶಾಂತಿ, ಸಮಾನತೆಯ ಸಂಕೇತವಾಗಿರುವ ಪವಿತ್ರ ರಂಜಾನ್ ಹಬ್ಬವನ್ನು ಗ್ರಾಮದ ಮುಸ್ಲಿಂ ಬಾಂಧವರು ಸಡಗರ, ಸಂಭ್ರಮದೊಂದಿಗೆ ಪರಸ್ಪರ ಶುಭಾಷಯ ವಿನಿಮಯ ಮಾಡಿಕೊಳ್ಳುವ ಮೂಲಕ ಆಚರಿಸಿದರು.



ಗ್ರಾಮದ ಈದ್ಗಾ ಮೈದಾನದಲ್ಲಿ ಗುರುವಾರ ಬೆಳಿಗ್ಗೆ 9–15 ಘಂ,ಗೆ ಸೇರಿದ ಬಾಂಧವರು ದುಆ ಮೂಲಕ ದೇಶಾದ್ಯಂತ ಶಾಂತಿ ಸೌಹಾರ್ದತೆ ಬೆಳಗಲಿ, ಪ್ರತಿಯೊಬ್ಬರು ಸನ್ಮಾರ್ಗದತ್ತ ಬರಲಿ, ಪ್ರತಿಯೊಬ್ಬರ ವಯಕ್ತಿಕ ತೊಂದರೆಗಳು ದೂರವಾಗಿ ನೆಮ್ಮದಿಯಿಂದ ಜೀವನ ನಡೆಸಲು ಅನುಗ್ರಹಿಸುವಂತೆ ಅಂಜುಮನ್ ಸಮೀತಿಯ ಅಧ್ಯಕ್ಷ ಹಾಫಿಜ ಸಲೀಮ ಜಮಖಂಡಿ, ಹಾಫಿಜ್ ಲಾಲ್ ಮೊಹಮ್ಮದ, ಹಾಫಿಜ ಆದಮ್ ಸರಕಾವಸ, ಸಾಮೂಹಿಕ ಪ್ರಾರ್ಥನೆ ನೆರವೇರಿಸಿ ಅಲ್ಲಾಹನಲ್ಲಿ ಪ್ರಾರ್ಥಿಸಿದರು. ಹಾಫಿಜ ಆಶಿಫ ಕೌಜಲಗಿಯವರು ಕಳೆದ ಒಂದು ತಿಂಗಳ ಕಾಲ ಸಾಮೂಹಿಕ ಕುರಾನ ಪಠನವನ್ನು (ತರಾವಿಹ ನಮಾಜ) ನೆರವೇರಿಸಿದರು

ಇದರ ಮೂಲಕ ಕಳೆದ ಒಂದು ತಿಂಗಳಿನಿಂದ ಆಚರಿಸಲಾಗುತಿದ್ದ ರೋಜಾ ( ಉಪವಾಸ ವೃತ ) ಆಚರಣೆಗೆ ವಿಧಾಯ ಹೇಳಲಾಯಿತು.

ಸೌಹಾರ್ದತೆಯ ಅನಾವರಣ: ಕಳೆದ ಒಂದು ತಿಂಗಳಿನಿಂದ ಆಚರಿಸಲಾಗುತಿದ್ದ ರೋಜಾ ವ್ರತಧಾರಿಗಳಿಗೆ ರಾಜಕೀಯ ಮುಖಂಡರು ಸೇರಿದಂತೆ ಹಲವಾರು ಜನ ಹಿಂದೂ ಬಾಂಧವರು ಈಫ್ತಾರ ಕೂಟ ಏರ್ಪಡಿಸುವ ಮೂಲಕ, ಹಾಗೂ ರೋಜಾ ವೃತ ಆಚರಿಸುವ ಮೂಲಕ ಸೌಹಾರ್ದತೆ ಮೆರೆದರು. ಮುಸ್ಲಿಂ ಬಾಂಧವರು ಕೂಡ ಹಬ್ಬದಂದು ತಮ್ಮ ಹಿಂದೂ ಮಿತ್ರರನ್ನು ಮನೆಗೆ ಆವ್ಹಾನಿಸಿ ವಿಶೇಷ ಸಿಹಿ ಖಾದ್ಯ ಸುರಕುರಮಾ ತಿನ್ನಿಸುವ ಮೂಲಕ ಖುಷಿ ಪಟ್ಟರು. ಐದು ವರ್ಷದ ಮಕ್ಕಳಿಂದ ಹಿಡಿದು 90 ವರ್ಷದ ವಯೋವೃದ್ದರ ವರೆಗೆ ಬೆಳಿಗ್ಗೆ 4.50 ಗಂ.ಯಿಂದ ಸಂಜೆ 6.50 ರವರೆಗೆ ಬಾಯಲ್ಲಿ ಹನಿ ನೀರು ಹಾಕದೆ ಒಂದು ತಿಂಗಳ ಕಾಲ ರೋಜಾ ಆಚರಣೆ ಮಾಡುವ ಮೂಲಕ ಹಬ್ಬದ ಸಾರ್ಥಕತೆ ಮೆರೆದರು ಮುಸ್ಲಿಂ ಸಮಾಜದ ಪ್ರಮುಖರಾದ ರುಸ್ತುಂ ಮಾಲದಾರ ಹನಿಫ ಚಿಕ್ಕೋಡಿ, ಅಮೀರಲಿ ಸರಕಾವಸ, ಮೀರಾಸಾಬ ಯಾದವಾಡ, ಹಾಜಿಲಾಲ ಜಮಾದಾರ, ಅಲ್ಲಾವುದ್ದೀನ ಮೋಪಗಾರ ಉಪಸ್ಥಿತರಿದ್ದರು.

# ಸತ್ಯದ ಪರ ಇರುವವರಿಗೆ ಮತಹಾಕಿ ಗೆಲ್ಲಿಸಿ :ಸಚಿವ ಎಂ.ಬಿ.ಪಾಟೀಲ

**ಉದಯರಶ್ಮಿ ನ್ಯೂಸ್**



ವಿಜಯಪುರ: ಸುಳ್ಳು ಹೇಳುವವರನ್ನು ನಂಬದೇ ಸತ್ಯದ ಪರ ಇರುವವರಿಗೆ ಮತಹಾಕಿ ಗೆಲ್ಲಿಸಿ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಮತದಾರರಿಗೆ ಕರೆ ನೀಡಿದ್ದಾರೆ.

ವಿಜಯಪುರ ನಗರದಲ್ಲಿ ಇಂದು ಬುಧವಾರ ಮುಸ್ಸಂಜೆ ನಡೆದ ನಾಗಠಾಣ ವಿಧಾನ ಸಭೆ ಕ್ಷೇತ್ರ ವ್ಯಾಪ್ತಿಯ ಚುನಾವಣೆ ಪ್ರಚಾರ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರೊ.ರಾಜು ಆಲಗೂರ ಎರಡು ಬಾರಿ ಶಾಸಕರಾಗಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷರಾಗಿ ಕಟ್ಟಾ ಕಾಂಗ್ರೆಸ್ಸಿಗರಾಗಿ ಉತ್ತಮ ಕೆಲಸ ಮಾಡಿದ್ದಾರೆ. ಕಳೆದ ಸಲ ಜೆಡಿಎಸ್ ಗೆ ಟಿಕೇಟ್ ನೀಡಿದ ಹಿನ್ನೆಲೆ ಆಲಗೂರ ಅವ–ರಿಗೆ ಚುನಾವಣೆಯಲ್ಲಿ ಟಿಕೇಟ್ ನೀಡಿರಲಿಲ್ಲ. ಈ ಬಾರಿ ಒಮ್ಮತದ ಅಭ್ಯರ್ಥಿಯಾಗಿ ಅವರಿಗೆ ಟಿಕೇಟ್ ನೀಡಲಾಗಿದೆ. ಅವರು ಶಾಸಕರಾಗಿ ವಿಧಾನಸಭೆಯಲ್ಲಿ ಮಾಡಿದಂತೆ ಲೋಕಸಭೆಯಲ್ಲಿ ವಿಜಯಪುರದ ಧ್ವನಿಯಾಗಿ ಕೆಲಸ ಮಾಡಲಿದ್ದಾರೆ ಎಂದು ಅವರು ಹೇಳಿದರು.

ಸಂಸದ ರಮೇಶ ಜಿಗಜಿಣಗಿ ಅವರು ಯಾವುದೇ ಕೆಲಸ ಮಾಡಿಲ್ಲ. ರೇಲ್ವೆ ಮೇಲ್ಸೇತುವೆ ಕುರಿತು ಅವರು ಪ್ರಸ್ತಾಪಿಸುತ್ತಾರೆ. ಆದರೆ, ಈ ರೇಲ್ವೆ ಮೇಲ್ಸೇತುವೆಯಲ್ಲಿ ರಾಜ್ಯ ಸರಕಾರವೂ ಶೇ. 50 ರಷ್ಟು ಅನುದಾನ ನೀಡುತ್ತದೆ ಎಂದು ಅವರು ಸ್ಪಷ್ಟಪಡಿಸಿದರು.

2014 ರಲ್ಲಿ ಮೋದಿ ದೊಡ್ಡ ಬದಲಾವಣೆ ತರುವುದಾಗಿ ಪ್ರಚಾರ ಮಾಡಿದರು. ಆದರೆ, ಕಪ್ಪು ಹಣ ವಾಪಸ್ ತರುವುದು ಸೇರಿದಂತೆ ಯಾರ ಅಕೌಂಟಿಗೂ ರೂ. 15 ಲಕ್ಷ ಹಾಕಲಿಲ್ಲ. ಪ್ರತಿವರ್ಷ ಎರಡು ಕೋಟಿ ಉದ್ಯೋಗ ಸೃಷ್ಟಿ ಮಾಡಲಿಲ್ಲ. ನೋಟ್ ಬ್ಯಾನ್ ನಿಂದ ಜನಸಾಮಾನ್ಯರು ಸಂಕಷ್ಟ ಎದು–ರಿಸುವಂತೆ ಮಾಡಿದರು. ರೈತರ ಆದಾಯ ದ್ವಿಗುಣ ಮಾಡಲಿಲ್ಲ. ನಾವು ನೀರಾವರಿ ಮೂಲಕ ರೈತರ ಆದಾಯ ಹೆಚ್ಚಿಸಿದ್ದೇವೆ. ಭೂಮಿಯ ಬೆಲೆ ಈಗ 10 ಪಟ್ಟು ಹೆಚ್ಚಾಗಿದೆ. ತೈಲ ಮತ್ತು ಗ್ಯಾಸ್ ಬೆಲೆ ಏರಿಕೆ ಇವರು ನೀಡಿರುವ ಅಚ್ಛೆದಿನ್ ಆಗಿವೆ. ತಿನ್ನುವ ಆಹಾರ ಸೇರಿ ಎಲ್ಲ ವಸ್ತುಗಳ ಮೇಲೆ ಜಿ.ಎಸ್.ಟಿ ಹಾಕಿದ್ದಾರೆ. ಎಲೆಕ್ಟ್ರಾಲ್ ಬಾಂಡ್ ನಲ್ಲಿ ಇವರ ಎಲ್ಲ ಕೆಲಸಗಳು ಬಹಿರಂಗವಾಗಿವೆ. ಕೇಂದ್ರದಲ್ಲಿ ನೆಹರೂ, ಇಂದಿರಾ ಗಾಂಧಿ, ರಾಜೀವ ಗಾಂಧಿ, ಮನಮೋಹನಸಿಂಗ್ ಸೇರಿದಂತೆ ಕಾಂಗ್ರೆಸ್ ಪ್ರಧಾನಿಗಳ ಅವಧಿಯಲ್ಲಿ ಸ್ಥಾಪಿಸಲಾದ ಸಂಸ್ಥೆಗಳನ್ನು ಈ ಬಿಜೆಪಿ ಸರಕಾರ ಖಾಸಗೀಕರಣ ಮಾಡುತ್ತಿದೆ. ಕಳಂಕಿತರು ಬಿಜೆಪಿಗೆ ಸೇರ್ಪಡೆಯಾದರೆ ಕಳಂಕ ರಹಿತರಾಗುತ್ತಿದ್ದಾರೆ. ಸುಳ್ಳು ಹೇಳುವವರನ್ನು ನಂಬದೇ ಸತ್ಯವಂತರ ಪರ ಮತ ಹಾಕಿ ಎಂದು ಹೇಳಿದರು.

ಭೂತ ಮಟ್ಟದಲ್ಲಿ ಪಕ್ಷ ಸಂಘಟನೆ ಮಾಡಿ ಮತದಾನ ಪ್ರಮಾಣ ಹೆಚ್ಚಿಸಬೇಕು. ಆಲಗೂರ ಅವರಿಗೆ ಹಾಕುವ ಮತ ಖರ್ಗೆ,ಸೋನಿಯಾ, ರಾಹುಲ, ಸಿದ್ಧರಾಮಯ್ಯ, ಶಿವಕುಮಾರ, ನನಗೆ ಹಾಕಿದಂತೆ ಎಂದು ಎಂ. ಬಿ. ಪಾಟೀಲ ಹೇಳಿದರು.

ವಿಧಾನ ಪರಿಷತ ಶಾಸಕ ಸುನೀಲಗೌಡ ಪಾಟೀಲ ಮಾತನಾಡಿ, ಕಾಂಗ್ರೆಸ್ ಗ್ಯಾರಂಟಿ ಟೀಕಿಸುವ ಬಿಜೆಪಿಯವರು ಈಗ ಮೋದಿ ಗ್ಯಾರಂಟಿ ಎಂದು ಪ್ರಚಾರ ಗಿಟ್ಟಿಸಿಕೊಳ್ಳುತ್ತಿದ್ದಾರೆ. ಪ್ರವಾಸಿ ತಾಣವಾಗಿರುವ ವಿಜಯಪುರದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕವಾಗಿ ಸಂಸದರು ಯಾವುದೇ ಕೆಲಸ ಮಾಡಿಲ್ಲ. ಮೂರು ಅವಧಿಯಲ್ಲಿ ಸಂಸದರ ಅಭಿವೃದ್ಧಿ ಶೂನ್ಯವಾಗಿದೆ. ಸಂಸತ್ತಿನಲ್ಲಿ ಒಂದೂ ಪ್ರಶ್ನೆ ಕೇಳಿಲ್ಲ. ಬಿಜೆಪಿ ಸಂಸದರು ಪ್ರಧಾನಿ ಮೋದಿ ಎದುರು ಮಾತನಾಡುವುದಿಲ್ಲ. ಜಲಸಂಪನ್ಮೂಲ ಸಚಿವರಾಗಿ ಎಂ. ಬಿ. ಪಾಟೀಲ ಮಾಡಿರುವ ಯೋಜನೆಗಳಿಂದ ಜಿಲ್ಲೆಯಲ್ಲಿ ಅಂತರ್ಜಲ ಹೆಚ್ಚಾಗಿ ನೀರಿನ ಬವಣೆ ತಪ್ಪಿದೆ. ನೀರಿಗಾಗಿ ಮತ ಹಾಕಿ. ಪ್ರೊ. ರಾಜು ಆಲಗೂರ ಮತದಾರರ ಧ್ವನಿಯಾಗಿ ಕೆಲಸ ಮಾಡಲಿದ್ದಾರೆ ಎಂದು ಹೇಳಿದರು.

ಕಾಂಗ್ರೆಸ್ ಅಭ್ಯರ್ಥಿ ಪ್ರೊ. ರಾಜು ಆಲಗೂರ ಮಾತನಾಡಿ, ಮತ ಕೇಳುವ ನೈತಿಕತೆ ನನಗಿದೆ. ಆದರೆ, ಬಿಜೆಪಿಯವರಿಗೆ ಮತ ಕೇಳುವ ನೈತಿಕತೆ ಇಲ್ಲ. 2013ರಿಂದ 2018ರ ಅವಧಿಯಲ್ಲಿ ಜಿಲ್ಲೆಯಲ್ಲಿ ಎಂ. ಬಿ. ಪಾಟೀಲ ನೀರಾವರಿ ಮಾಡಿದ್ದಾರೆ. ಎಂಬಿಪಿ ಅವರ ಅಭಿವೃದ್ಧಿ ಯೋಜನೆಗಳು ನನ್ನ ಕೈಹಿಡಿಯಲಿವೆ. ಅಲ್ಲದೇ, ನಾನು ಎರಡು ಬಾರಿ ಶಾಸಕನಾಗಿ ಕೆಲಸ ಮಾಡಿದ್ದೇನೆ. ಬಿಜೆಪಿ ಸಂಸದರು ಕಳೆಷ 15 ವರ್ಷಗಳಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಮಾಡಿಲ್ಲ. ದೇಶದಲ್ಲಿಯೇ ಒಂದೂ ಕೆಲಸ ಮಾಡದ ಸಂಸದ ರಮೇಶ ಜಿಗಜಿಣಗಿ ಆಗಿದ್ದಾರೆ ಎಂದು ಹೇಳಿದರು.

ನಾಗಠಾಣ ಶಾಸಕ ವಿಠ್ಠಲ ಕಟಕದೊಂಡ ಮಾತನಾಡಿ, ಯೋಚನೆ ಮಾಡಿ ಮತ ಹಾಕಿ. ಜನರಿಗೆ ಕೈಗೆ ಸಿಗುವ ಜನಪ್ರತಿನಿಧಿಗೆ ಮತ ಹಾಕಿ. ನಾಗಠಾಣ ಮತಕ್ಷೇತ್ರದಿಂದ 50 ಸಾವಿರ ಲೀಡ್ ಕೊಡಿಸಿ ಎಂದು ಹೇಳಿದರು.

ಕೌಶಲ್ಯಾಭಿವೃದ್ಧಿ ನಿಗಮದ ಅಧ್ಯಕ್ಷೆ ಕಾಂತಾ ನಾಯಕ ಮಾತನಾಡಿ, ಜಿಗಜಿಣಗಿ ಹಠಾವೋ, ತಾಂಡಾ ಬಚಾವೋ. ನಮ್ಮ ಓಟು ಬೇಡ ಎಂದ ಅವರನ್ನು ಮನೆಗೆ ಕಳುಹಿಸಿ ನಮ್ಮ ಸ್ವಾಭಿಮಾನ ಎತ್ತಿ ಹಿಡಿಯೋಣ ಎಂದು ಹೇಳಿದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಂ. ಎಸ್. ಲೋಣಿ, ಮುಖಂಡರಾದ ಎಂ. ಆರ್. ಪಾಟೀಲ, ಡಿ. ಎಲ್. ಚವ್ಹಾಣ ಮಾತನಾಡಿ, ರಾಜು ಆಲಗೂರ ಆಯ್ಕೆ ಖಚಿತವಾಗಿದ್ದು, ಎಲ್ಲ ಕಾರ್ಯಕರ್ತರು ಮತದಾರರ ಮನೆಮನೆಗಳಿಗೆ ತೆರಳಿ ಮತಯಾಚಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಅಬ್ದುಲ್ ಹಮೀದ ಮುಶ್ರಿಫ್, ಡಾ. ಗಂಗಾಧರ ಸಂಬಣ್ಣಿ, ಷಹಜಹಾನ ಮುಲ್ಲಾ, ಶ್ರೀದೇವಿ ಉತ್ಲಾಸರ, ಎಂ. ಆರ್. ಪಾಟೀಲ, ಷಹಜಹಾನ್ ಧುಂಡಸಿ ಮುಂತಾದವರು ಉಪಸ್ಥಿತರಿದ್ದರು.

ಸುರೇಶ ಬಿಜಾಪೂರ ಕಾರ್ಯಕ್ರಮ ನಿರೂಪಿಸಿದರು.

# ಹನುಮಪ್ಪನಾಯಕನ ಜಯಂತಿ ಆಚರಿಸಲು ಸರ್ಕಾರಕ್ಕೆ ಆಗ್ರಹ

**ಉದಯರಶ್ಮಿ ನ್ಯೂಸ್**




ಬಸವನಬಾಗೇವಾಡಿ: ಇಂದಿನ ಜನಾಂಗಕ್ಕೆ ಹಂಡೆ ಅರಸರ ಇತಿಹಾಸವನ್ನು ತಿಳಿಸುವ ಉದ್ದೇಶದಿಂದ ಹಂಡೆ ಅರಸರ ಕುಲತಿಲಕ, ಬಳ್ಳಾ–ರಿಯ ನವನಿರ್ಮಾಪಕ ಹಂಡೆ ಅರಸ ಹನುಮಪ್ಪನಾಯಕ ಜಯಂತ್ಯೋತ್ಸವವನ್ನು ಪ್ರತಿವರ್ಷ ಏ.9 ರಂದು ರಾಜ್ಯ ಸರ್ಕಾರದಿಂದ ಆಚರಿಸುವಂತೆ ಆಗಬೇಕೆಂದು ಅಖಿಲ ಕರ್ನಾಟಕ ವೀರಶೈವರ ಲಿಂಗಾಯತ ಹಂಡೆವಜೀರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಡಾ.ಎಸ್. ಎಸ್.ಪಾಟೀಲ ಹೇಳಿದರು.

ತಾಲೂಕಿನ ವಡವಡಗಿ ಗ್ರಾಮದ ನಂದಿಮಠದ ಆವರಣದಲ್ಲಿ ಅಖಿಲ ಕರ್ನಾಟಕ ವೀರಶೈವರ ಲಿಂಗಾಯತ ಹಂಡೆವಜೀರ ಕ್ಷೇಮಾಭಿವೃದ್ಧಿ ಸಂಘ, ಕಲಬುರಗಿಯ ಚಾಲುಕ್ಯ ಸಂಸ್ಕೃತಿ ಅಧ್ಯಯನ ಪೀಠ, ಸಂಘದ ಜಿಲ್ಲಾ, ತಾಲೂಕು, ಗ್ರಾಮ ಘಟಕದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಹಂಡೆ ಅರಸ ಹನುಮಪ್ಪನಾಯಕನ ಜಯಂತ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈಗಾಗಲೇ ಕಲಬುರಗಿಯ ಚಾಲುಕ್ಯ ಸಂಸ್ಕೃತಿ ಅಧ್ಯಯನ ಪೀಠವು ಹಂಡೆ ಪಾಳೆಗಾರರ ಇತಿಹಾಸ ಪರಂಪರೆ ಸೇರಿದಂತೆ ಹಂಡೆ ಅರಸರ ಇತಿಹಾಸದ ಮೇಲೆ ಸಾಕಷ್ಟು ಕೃತಿಗಳನ್ನು ಹೊರತರುವ ಮೂಲಕ ಹಂಡೆ ಅರಸರ ಇತಿಹಾಸವನ್ನು ದಾಖಲೀಕರಣ ಮಾಡಿದೆ. ತಾಲೂಕಿನ ಮುತ್ತಗಿ ಗ್ರಾಮದಲ್ಲಿ ಜನಿಸಿದ ಹನುಮಪ್ಪನಾಯಕನು ಬಳ್ಳಾರಿ ಸೇರಿ ಇತರೆಡೆ ಕೋಟೆ, ಕೊತ್ತಲಗಳನ್ನು ಕಟ್ಟಿದ ಇತಿಹಾಸವಿದೆ. ಇಂತಹ ಧೀಮಂತ ಇತಿಹಾಸಪುರುಷನ ಇತಿಹಾಸ ಎಲ್ಲೆಡೆ ಪಸ–ರಿಸುವಂತಾಗಬೇಕಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಮುಂದಿನ ದಿನಗಳಲ್ಲಿ ಹಂಡೆ ಹನುಮಪ್ಪನಾಯಕನ ಜಯಂತಿಯನ್ನು ಆಚರಿಸಲು ಮುಂದಾಗಬೇಕೆಂದರು.

ಚಾಲುಕ್ಯ ಸಂಸ್ಕೃತಿ ಅಧ್ಯಯನ ಪೀಠದ ಅಧ್ಯಕ್ಷ ಜಿ.ಎನ್.ಪಾಟೀಲ ಮಾತನಾಡಿ, ಸಮಾಜಮುಖಿ, ಶಿಕ್ಷಣಮುಖಿ ಕೆಲಸ ಮಾಡಿದ ಹಂಡೆವಜೀರ ಸಮಾಜ ಬಾಂಧವರ ಸಾಮಾಜಿಕ ಕಾರ್ಯಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಉದ್ದೇಶ ಹೊಂದಿದೆ. ಈಗಾಗಲೇ ಸಮಾಜದ ಇತಿಹಾಸವನ್ನು ದಾಖಲು ಮಾಡಲಾಗುತ್ತಿದೆ. ಮೊದಲ ಬಾರಿಗೆ ಬಸವನಬಾಗೇವಾಡಿಯಲ್ಲಿ ನಮ್ಮ ಸಮಾಜದ ರಾಜ್ಯಮಟ್ಟದ ಸಮಾವೇಶವನ್ನು ಹಮ್ಮಿಕೊಳ್ಳಲಾಗಿ–ತ್ತು. ಈ ಸಂದರ್ಭದಲ್ಲಿ ನಮ್ಮ ಸಮಾಜದ ಇತಿಹಾಸದ ಸಂಶೋಧನೆ ಮಾಡಬೇಕೆಂಬ ಕ್ಷೇತ್ರಕಾರ್ಯ ಆರಂಭವಾಯಿತು. ಈಗಾಗಲೇ ನಮ್ಮ ಸಮಾಜದ ಕುರಿತು ಮೂರು ಪಿಎಚ್ಡಿ ಪ್ರಬಂಧಗಳು ಹೊರಬರುವ ಅನೇಕ ಕೃತಿಗಳು ಹೊರಬಂದಿವೆ. ಇತಿಹಾಸ ಅರಿತುಕೊಂಡು ಸಮಾಜದ ಅಭಿವೃದ್ಧಿಗೆ ಶ್ರಮಿಸಬೇಕೆಂದರು.

ರಾಜ್ಯ ಸಂಘದ ಉಪಾಧ್ಯಕ್ಷ ಎಸ್.ಜಿ.ಪಾಟೀಲ ಮಾತನಾಡಿ, ನಮ್ಮ ಸಂಘದಿಂದ 10 ವರ್ಷಕೊಮ್ಮೆ ಸಮ್ಮೇಳನವನ್ನು ಆಯೋಜನೆ ಮಾಡಲಾಗುತ್ತಿದೆ. ಈ ಸಲ ಬರುವ ನವೆಂಬರ್ ತಿಂಗಳಲ್ಲಿ ಮುದ್ದೇಬಿಹಾಳದಲ್ಲಿ ಆಯೋಜನೆ ಮಾಡಲಾಗುತ್ತಿದೆ. ನಮ್ಮ ಸಮಾಜದ ಎಲ್ಲ ಕಾರ್ಯಗಳಿಗೆ ಅನೇಕರು ಸಹಕಾರ ನೀಡಿದ್ದಾರೆ ಎಂದರು.

ನೆಲ್ಲೂರಿನ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕ ಡಿ. ಎನ್.ಪಾಟೀಲ ಮಾತನಾಡಿ, ಇತಿಹಾಸ ಪುರುಷ ಹಂಡೆಹನುಮಪ್ಪ ನಾಯಕನು ದೈವಭಕ್ತಿ ಹೊಂದುವ ಜೊತೆಗೆ ನಾಡ ರಕ್ಷಣೆಯ ಗುಣವನ್ನು ಹೊಂದಿದ್ದನು. ಅರ್ಧಕ್ಕೆ ನಿಂತಿ–ದ್ದ ಲೇಪಾಕ್ಷಿ ದೇವಾಲಯವನ್ನು ಪೂರ್ಣಗೊಳಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. ಇವನ ನ್ಯಾಯ ಪದ್ಧತಿ ವಿಶೇಷವಾಗಿ–ತ್ತು. ಇವನ ಇತಿಹಾಸದ ಕುರಿತು ಪಠ್ಯಪುಸ್ತಕದಲ್ಲಿ ಬರುವಂತಾಗಬೇಕು. ಹಂಡೆವಜೀರ ಸಮಾಜದ ಇತಿಹಾಸ ವೇದೋಕ್ತಕಾಲದಿಂದಲೂ ಇರುವದನ್ನು ಕಾಣುತ್ತೇವೆ. ಚಂದಿಮರಸ ಎಂಬ ಶರಣನು ಈ ಸಮಾಜದವನು. ಹಂಡೆವಜೀರ ಸಮಾಜ ಬಾಂಧವರಿಗೆ ತಮ್ಮ ಪಕ್ಕದಲ್ಲಿರುವವರನ್ನು ದೊಡ್ಡವರನ್ನಾಗಿ ಮಾಡುವ ಗುಣವಿದೆ ಎಂದರು.

ಶಿಕ್ಷಕ ವೈ.ಎಸ್.ಗಂಗಶೆಟ್ಟಿ ಹಂಡೆಹನುಮಪ್ಪನಾಯಕ ಕುರಿತು ಮಾತನಾಡಿದರು.

ಸಾನಿಧ್ಯ ವಹಿಸಿದ್ದ ವೀರಸಿದ್ದ ಸ್ವಾಮೀಜಿ, ನಿವೃತ್ತ ಪ್ರಾಂಶುಪಾಲ ಎಸ್.ಬಿ.ಬಿರಾದಾರ, ಬಸವರಾಜ ಡೆಂಗಿ ಮಾತನಾಡಿದರು.

ಸಾನಿಧ್ಯವನ್ನು ಬೃಂಗೀಶ್ವರಲಿಂಗ ಶಿವಾಚಾರ್ಯ ಸ್ವಾಮೀಜಿ, ನಾಗಭೂಷಣ ಶಾಸ್ತ್ರೀಜಿ ವಹಿಸಿದ್ದರು.

ವೇದಿಕೆಯಲ್ಲಿ ರಾಜಶೇಖರ ಮ್ಯಾಗೇರಿ, ಬಾಪುಗೌಡ ಬ್ಯಾಕೋಡ, ಪ್ರೇಮಕುಮಾರ ಮ್ಯಾಗೇರಿ, ಅವ್ವಣ್ಣಗೌಡ ಗ್ವಾತಗಿ, ಶಂಕರಗೌಡ ರಾಯಗೊಂಡ, ಸಂಗಮೇಶ ಕರಭಂಟನಾಳ, ಸಂಗನಗೌಡ ಯಂಕಂಚಿ, ಪ್ರಭುಗೌಡ ಬೆಳ್ಳಿ, ಎಂ.ಬಿ.ಪಾಟೀಲ, ನಾಗರಾಜ ತಂಗಡಗಿ, ಎಸ್.ಎಸ್.ಪಾಟೀಲ, ಹನಮಂತರಾಯಗೌಡ ಪಾಟೀಲ, ಲಲಿತಾ ಬಿರಾದಾರ, ಪೂರ್ಣಿಮಾ ಹೆಬ್ಬಾಳ, ಶಿವಣ್ಣ ಬ್ಯಾಕೋಡ, ಮಲ್ಲಿಕಾರ್ಜುನ ಹಡಪದ, ಶರಣು ಬಡಿಗೇರ, ಬಾಬು ಬಗಲಿ, ರಮೇಶ ಕಟಗೂರ,ಸಿದ್ದನಗೌಡ ಪಾಟೀಲ, ಎಸ್.ಎಸ್.ಅವರಾದಿ, ಮಡಿವಾಳಪ್ಪಗೌಡ ಬಿರಾದಾರ ಇತರರು ಇದ್ದರು. ಸಂಗಮೇಶ ಶಿವಣಗಿ ಪ್ರಾರ್ಥಿಸಿದರು. ಆರ್. ಎಸ್.ಪಾಟೀಲ ಸ್ವಾಗತಿಸಿದರು. ದೇವೇಂದ್ರ ಗೋನಾಳ ನಿರೂಪಿಸಿದರು. ಪ್ರಭಾಕರ ಖೇಡದ ವಂದಿಸಿದರು.

ಕಾರ್ಯಕ್ರಮಕ್ಕೂ ಮುನ್ನ ಗ್ರಾಮದ ಪ್ರಮುಖ ಬೀದಿಗಳಲ್ಲಿ ಹಂಡೆಹನುಮಪ್ಪನಾಯಕ ಭಾವಚಿತ್ರದ ಮೆರವಣಿಗೆ ಕುಂಭಮೇಳ, ವಿವಿಧ ವಾದ್ಯಮೇಳದೊಂದಿಗೆ ಜರುಗಿತು.

# ಹರ್ಡೇಕರ ಪಿ.ಯು.ಕಾಲೇಜಿಗೆ ಶೇ.98 ಫಲಿತಾಂಶ

**ಉದಯರಶ್ಮಿ ನ್ಯೂಸ್**



ಆಲಮಟ್ಟಿ: ಸ್ಥಳೀಯ ಶ್ರೀಮದ್ ವೀರಶೈವ ವಿದ್ಯಾಲಯ ಅಸೋಷಿಯೇಶನ್ ನ ಮಂಜಪ್ಪ ಹರ್ಡೇಕರ ಪಿ.ಯು.ಕಾಲೇಜು 2023–24 ನೇ ಸಾಲಿನ ದ್ವಿತೀಯ ಪಿ.ಯು.ಪರೀಕ್ಷೆಯಲ್ಲಿ ಕಲಾ ಹಾಗೂ ವಾಣಿಜ್ಯ ವಿಭಾಗದಲ್ಲಿ ಒಟ್ಟು 133 ವಿದ್ಯಾರ್ಥಿಗಳಲ್ಲಿ 130 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಶೇ.98 ಉತ್ತಮ ಫಲಿತಾಂಶ ದಾಖಲಿಸಿದ್ದಾರೆ. ಕಲಾ ವಿಭಾಗದಲ್ಲಿ 81 ವಿದ್ಯಾರ್ಥಿಗಳಲ್ಲಿ 80 ಪರೀಕ್ಷೆಯಲ್ಲಿ ಪಾಸಾಗಿದ್ದಾರೆ. ಶೇ.98.78% ಪ್ರತಿಶತ ಫಲಿತಾಂಶ ಬಂದಿದೆ. ವಾಣಿಜ್ಯ ವಿಭಾಗದಲ್ಲಿ 51ವಿದ್ಯಾರ್ಥಿಗಳಲ್ಲಿ 49 ಪರೀಕ್ಷೆಯಲ್ಲಿ ಪಾಸಾಗಿದ್ದಾರೆ. ಶೇ.96.07% ಫಲಿತಾಂಶ ಬಂದಿದೆ.

ಕಲಾ ವಿಭಾಗದಲ್ಲಿ ಯಲ್ಲಮ್ಮ ಗೂಗಿಹಾಳ 572(ಶೇ.95.33) ಪ್ರಥಮ ತಸ್ಮಿಯಾ ನಿಂಬಿಹಾಳ 558(ಶೇ.93%) ಕಾಲೇಜಿಗೆ ದ್ವಿತೀಯ ಸ್ಥಾನ ಪ್ರೀತಿ ವಡಗೇರಿ.546(91%) ತೃತೀಯ ಸ್ಥಾನ ಪಡೆದು ಕೊಂಡಿದ್ದಾಳೆ.ವಾಣಿಜ್ಯ ವಿಭಾಗದಲ್ಲಿ ಅಕ್ಷತಾ ಪಾಟೀಲ.555(92.5%) ಪ್ರಥಮ ಸ್ಥಾನವನ್ನು ವಿಜಯಲಕ್ಷ್ಮೀ. ರಾಠೋಡ.552 (92%) ದ್ವಿತೀಯ ಸ್ಥಾನ ತೈಸಿನ ಕಡಲಗಿ 515(85.8%) ತೃತೀಯ ಸ್ಥಾನ ಪರೀಕ್ಷೆಯಲ್ಲಿ ಉತ್ತಮ ಸಾಧನೆಯೊಂದಿಗೆ ತೇರ್ಗಡೆ ಹೊಂದಿ ಶಾಲೆಗೆ,ಸಂಸ್ಥೆಗೆ, ಊರಿಗೆ ಕೀರ್ತಿ ತಂದಂಥ ಎಲ್ಲ ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷರಾಗಿರುವ ಗದುಗಿನ ತೋಂಟದ ಡಾ॥ ಸಿದ್ದರಾಮ ಮಹಾಸ್ವಾಮಿಗಳವರು ಹಾಗೂ ಕಾರ್ಯದರ್ಶಿ ಪ್ರೋ॥ ಶಿವಾನಂದ ಪಟ್ಟಣಶೆಟ್ಟರ ಮತ್ತು ಕಾಲೇಜಿನ ಪ್ರಾಚಾರ್ಯ ಪಿ.ಎ.ಹೇಮಗಿರಿಮಠ, ಸೇರಿದಂತೆ ಸಮಸ್ತ ಸಿಬ್ಬಂದಿ ವರ್ಗದವರು ಆಡಳಿತ ಮಂಡಳಿಯ ಎಲ್ಲ ಸದಸ್ಯರು ಅಭಿನಂದಿಸಿದ್ದಾರೆ.




# ಬದುಕೆಂಬ ಸೋಜಿಗ



## ಭಾವರಶ್ಮಿ

– ಭವ್ಯ ಟಿ.ಎಸ್.

("ನಮ್ಮ ಕಥಾ ಅರಮನೆ" ಬರಹಗಾರರು)

ಉದಯರಶ್ಮಿ ದಿನಪತ್ರಿಕೆ

ನಾವು ಶಾಲೆ,ಕಾಲೇಜು,ವಿಶ್ವ ವಿದ್ಯಾನಿಲಯಗಳಲ್ಲಿ ಕಲಿಯುವ ಪಾಠಗಳಿಗಿಂತ ಅಗಾಧವಾದ ಜ್ಞಾನ,ಅನುಭವಗಳನ್ನು ಪಡೆಯುವುದು ನಮ್ಮ ಜೀವನದಿಂದ. ಆದರೆ ಅದನ್ನು ನಾವು ಸ್ವೀಕ–ರಿಸುವ ದೃಷ್ಟಿಕೋನ ಇಲ್ಲಿ ಬಹಳ ಮುಖ್ಯವಾಗುತ್ತದೆ.

ಅನನ್ಯ ಮತ್ತು ಅಂಕಿತ ಮಧ್ಯಮವರ್ಗದ ಕುಟುಂಬದಲ್ಲಿ ಹುಟ್ಟಿದ ಸಹೋದರಿಯರು.ಇಬ್ಬರ ಸ್ವಭಾವದಲ್ಲಿ ಭಿನ್ನತೆಗಳಿದ್ದವು.

ಅನನ್ಯಳಿಗೆ ತನ್ನ ಕುಟುಂಬದ ಪರಿಸ್ಥಿತಿ, ತಂದೆ ತಾಯಿ ನಮಗಾಗಿ ಮಾಡುವ ತ್ಯಾಗದ ಬಗ್ಗೆ ಕಾಳಜಿಯಿತ್ತು.

ಅವಳು ತುಂಬಾ ಒಳ್ಳೆಯ ವಿದ್ಯಾರ್ಥಿನಿ ಎಂದು ಶಾಲೆಯಲ್ಲಿಯೂ ಮೆಚ್ಚುಗೆ ಗಳಿಸಿದ್ದಳು.ಕಷ್ಟ ಸುಖ ಎರಡೂ ಸಂದರ್ಭಗಳಲ್ಲಿ ಸಮಚಿತ್ತತೆಯಿಂದ ಇರುವುದನ್ನು ರೂಢಿಸಿಕೊಂಡಿದ್ದಳು. ಆದರೆ ಅಂಕಿತ ಇದಕ್ಕೆ ತದ್ವಿರುದ್ಧವಾಗಿದ್ದಳು. ಅವಳಿಗೆ ಸದಾ ಕಾಲ ಸುಖಜೀವನದ ಕಲ್ಪನೆಯಿರುತಿತ್ತು.ತಂದೆ ತಾಯಿಗೆ ಎಷ್ಟೇ ಕಷ್ಟವಿದ್ದರೂ ತಾನು ಕೇಳಿದ್ದನ್ನು ತಕ್ಷಣ ಕೊಡಿಸಬೇಕೆಂದು ಹಟ ಹಿಡಿಯುತ್ತಿದ್ದಳು. ಓದಿನಲ್ಲಿ ಅಷ್ಟಾಗಿ ಆಸಕ್ತಿ ತೋರದ ಅವಳು ಗೆಳತಿಯರೊಡನೆ ಸುತ್ತುವುದು, ಕಾಡುಹರಟೆಯಲ್ಲಿ ಕಾಲ ಕಳೆಯುವುದು ಮಾಡುತ್ತಿದ್ದಳು. ಪದೇ ಪದೇ ಹಣ ಬೇಕೆಂದು ಅಪ್ಪ ಅಮ್ಮನನ್ನು ಪೀಡಿಸುತ್ತಿದ್ದಳು. ಮುಂದೆ ಅನನ್ಯ ಕಾಲೇಜು ಮುಗಿಸಿ ಒಂದು ಕೆಲಸಕ್ಕೆ ಸೇರಿಕೊಂಡಳು.

ಬರುವ ಅಲ್ಪ ಸಂಬಳವನ್ನು ಉಳಿತಾಯ ಮಾಡಿ ಕುಟುಂಬಕ್ಕೆ ನೆರವಾಗುತ್ತಿದ್ದಳು. ಆದರೆ ಅಂಕಿತ ಪಿ.ಯು.ಸಿಯಲ್ಲಿ ಫೇಲಾಗಿ ಶಿಕ್ಷಣವನ್ನು ಅರ್ಧಕ್ಕೆ ಕೈಬಿಟ್ಟಳು. ಯಾವಾಗಲೂ ಮನೆಯಲ್ಲಿಯೇ ಇದ್ದು ಅವಳಿಗೊಂದು ರೀತಿಯ ಖಿನ್ನತೆ ಆವ–ರಿಸಿತು. ಸದಾ ಎಲ್ಲರ ಮೇಲೆ ಸಿಡುಕುವುದು,ಮುಂಗೋಪದಲ್ಲಿ ಮಾತನಾಡುವುದು ಮಾಡುತ್ತಿದ್ದಳು. ತನ್ನ ಗೆಳತಿಯರೆಲ್ಲ ಮದುವೆಯಾಗುತ್ತಿದ್ದಾರೆ. ನಾನು ಮಾತ್ರ ಹೀಗೆ ಮನೆಯಲ್ಲಿ ಕುಳಿತಿದ್ದೇನೆ. ಅಪ್ಪ ಅಮ್ಮನಿಗೆ ಮಕ್ಕಳಿಗೆ ಮದುವೆ ಮಾಡುವ ಆಲೋಚನೆ ಇಲ್ಲವೆಂದು ಚುಚ್ಚು ಮಾತನಾಡುತ್ತಿದ್ದಳು.

ಯಾವಾಗಲೂ ಏನಾದರೊಂದು ಕೊರತೆ ಹುಡುಕಿ ಜಗಳ ಮಾಡುತ್ತಿದ್ದಳು.


ಅನನ್ಯ ತುಂಬಾ ಪ್ರಬುದ್ಧಳಾಗಿದ್ದಳು. ಅವಳು ಅಪ್ಪ ಅಮ್ಮನ ಹತ್ತಿರ ಅಂಕಿತಗೆ ಮದುವೆ ಮಾಡುವ ವಿಚಾರ

ಪ್ರಸ್ತಾಪಿಸಿದಳು. ಆಗ ಅವರು ಅಕ್ಕ ಇರುವಾಗ ತಂಗಿಗೆ

ಹೇಗೆ ಮದುವೆ ಮಾಡುವುದು,ಮೊದಲು ನೀನು ಮದುವೆ ಮಾಡಿಕೋ.ನಾವು ಕಷ್ಟವಾದರೂ ಸಾಲ ಸೋಲ ಮಾಡಿ ನಿನಗೆ ಮದುವೆ ಮಾಡುತ್ತೇವೆ. ನಂತರ ಎರಡು ವರ್ಷ ಬಿಟ್ಟು ಅಂಕಿತಳ ಮದುವೆ ಮಾಡ್ತೀವಿ ಅಂದರು. ಆದರೆ ಅನನ್ಯ ನಾನೀಗಲೇ ಮದುವೆಯಾಗಲಾರೆ. ಈ ಕುಟುಂಬದ ಜವಾಬ್ದಾರಿ ನನ್ನ ಮೇಲಿದೆ. ನನಗೂ ಸಾಧನೆಯ ಕನಸಿದೆ.ಆಮೇಲಷ್ಟೇ ನಾನು ಮದುವೆಯಾಗುವುದು.

ಈಗ ನನ್ನ ತಂಗಿಯ ಮದುವೆಯನ್ನು ನಾನೇ ಮುಂದೆ ನಿಂತು ಮಾಡುವೆ. ಜನರು ಹೇಗಿದ್ದರೂ ಮಾತನಾಡುತ್ತಾರೆ ಅದರ ಬಗ್ಗೆ ಚಿಂತೆ ಬೇಡವೆಂದು ತಂದೆ ತಾಯಿಗೆ ಧೈರ್ಯ ಹೇಳಿದಳು.ತನ್ನ ಉಳಿತಾಯದ ಹಣ ಜೊತೆಗೆ ಸಾಲ ಮಾಡಿ ಮದುವೆಗೆ ಸಿದ್ಧತೆ ಮಾಡತೊಡಗಿದಳು. ಅಪ್ಪ ಅಂಕಿತಳಿಗೆ ಗಂಡು ನೋಡತೊಡಗಿದರು. ತಿಂಗಳ ಅವಧಿಯಲ್ಲಿ ಗಂಡು ಮನೆಗೆ ಬಂದು ಹುಡುಗಿ ನೋಡಿ ಒಪ್ಪಿಗೆ ನೀಡಿ ಮದುವೆ ಸಿದ್ಧತೆಗಳಾದವು.

ಅಂಕಿತ ಮನೆಯವರ ಯಾವ ಕಷ್ಟಗಳಿಗೂ ಸ್ಪಂದಿಸದೆ ತಾನು ಅಂದುಕೊಂಡಂತೆ ಮದುವೆಯ ಬಟ್ಟೆ,ಫೋಟೊ



ಎಂದು ಖುಷಿಖುಷಿಯಾಗಿ ಸಿದ್ಧಳಾಗತೊಡಗಿದಳು.ಅನನ್ಯ ಅವಳಿಗೆ ಯಾವ ಕೊರತೆಯಾಗದಂತೆ ನೋಡಿಕೊಳ್ಳುತ್ತಿದ್ದಳು.

ಅಂಕಿತ ಅಂದುಕೊಂಡಂತೆ ವಿಜೃಂಭಣೆಯಿಂದ ಮದುವೆ ಕೂಡ ನಡೆಯಿತು. ತವರು ಮನೆ ಬಿಟ್ಟು ಹೋಗುವ ಯಾವ ನೋವು ಅವಳಿಗಿರಲಿಲ್ಲ. ಅನುಕೂಲಸ್ಥ ಗಂಡನ ಮನೆಯ

ಕಲ್ಪನೆಯಲ್ಲಿ ಅವಳು ತೇಲಾಡುತ್ತಿದ್ದಳು.ಅಂಕಿತಳನ್ನು ಕಳಿಸಿಕೊಡುವಾಗ ಅನನ್ಯ,ಅಪ್ಪ,ಅಮ್ಮ ಬಿಕ್ಕಿ ಬಿಕ್ಕಿ ಅತ್ತರು.

ಹೀಗೆ ಕೆಲವು ವರ್ಷಗಳು ಉರುಳಿದವು.ಅಂಕಿತ ಈಗ ಇಬ್ಬರು ಮಕ್ಕಳ ತಾಯಿ.ಗಂಡನ ಮನೆಯ ಜವಾಬ್ದಾರಿ, ಮಕ್ಕಳ ಲಾಲನೆ ಪಾಲನೆ ಅವಳಲ್ಲಿ ಸ್ವಲ್ಪ ಮಟ್ಟಿಗೆ ವಾಸ್ತವ ಜೀವನದ ಅರಿವು ಮೂಡಿಸಿದ್ದವು.ಒಂದು ದಿನ ಅನನ್ಯ ಅಂಕಿತಳಿಗೆ ಕರೆ ಮಾಡಿ ತವರಿಗೆ ಗಂಡ ಮಕ್ಕಳೊಂದಿಗೆ ಬಾ.

ಒಂದು ಸಿಹಿ ಸುದ್ದಿ ಹಾಗೂ ಕಾರ್ಯಕ್ರಮವಿದೆ ಎಂದು ತಿಳಿಸಿದಳು.ಅಂಕಿತ ಕೂಡಲೇ ಗಂಡನಿಗೆ ತಿಳಿಸಿ ಹೊರಟಳು.

ಈಗವಳು ತವರು,ತಂದೆ ತಾಯಿ,ಅಕ್ಕನ ಬಗ್ಗೆ ಮೊದಲಿಗಿಂತ ಅಕ್ಕರೆ ಹೊಂದಿದ್ದಳು.ತವರಲ್ಲಿ ಅವಳು ಬಂದಾಗ ಹಬ್ಬದ ವಾತಾವರಣವಿತ್ತು.ಅಂದು ಅನನ್ಯಳ ನಿಶ್ಚಿತಾರ್ಥ ನಡೆಯುತಿತ್ತು.ಜೊತೆಗೆ ಅನನ್ಯ ಕೆ.ಎ.ಎಸ್.ಅಧಿಕಾರಿಯಾಗಿ ಆಯ್ಕೆಯಾದ ಸಿಹಿ ಸುದ್ದಿ ಎಲ್ಲಾ ಕಡೆ ಹರಡಿ ಬಂಧುಗಳೆಲ್ಲರೂ ಬಂದಿದ್ದರು.

ಅನನ್ಯ ಕೆಲಸ ಮಾಡುತ್ತಲೇ ಕೆ.ಎ.ಎಸ್. ಪರೀಕ್ಷೆಗೆ ಸಿದ್ಧತೆ ಮಾಡಿದ್ದಳು.ದುಡಿದು ಮನೆಯ ಸಾಲ ತೀರಿಸಿ ಅಪ್ಪ ಅಮ್ಮನಿಗೆ ನೆರವು ನೀಡುತ್ತಲೇ ತನ್ನ ಉಜ್ವಲ ಭವಿಷ್ಯಕ್ಕೆ ತಳಹದಿ ರೂಪಿಸಿದ್ದಳು.ಅಂಕಿತಗೆ ತನ್ನ ಬಗ್ಗೆ ತನಗೆ ಮುಜುಗರ ಉಂಟಾಯಿತು.ತಾನು ವಯಸ್ಸಿನಲ್ಲಿ ಚಿಕ್ಕವಳಾದರೂ ಮದುವೆಗೆ ಆತುರಿಸಿದೆ. ಆದರೆ ಅಕ್ಕ ಎಲ್ಲಾ ಜವಾಬ್ದಾರಿ ಹೊತ್ತು,ಸಾಧನೆ ಮಾಡಿ ತೋರಿಸಿದಳು ಎಂಬುದು ಅವಳಿಗೆ ಜೀವನವನ್ನು ಹೇಗೆ ನೋಡಬೇಕೆಂಬ ಪಾಠ ಕಲಿಸಿತ್ತು.

ಅನನ್ಯ ತನಗೆ ಅನುರೂಪನಾದ ಹುಡುಗನೊಡನೆ ಮದುವೆ ಆದಳು. ಜೊತೆಗೆ ಅಧಿಕಾರಿಯಾಗಿ ಉನ್ನತ ಸ್ಥಾನಕ್ಕೇರಿದಳು.

ಜೀವನ ಎಲ್ಲರಿಗೂ ಅವಕಾಶಗಳನ್ನು ನೀಡುತ್ತದೆ.

ಕೆಲವರು ದುಡುಕಿ ಅವಕಾಶಗಳಿಂದ ವಂಚಿತರಾಗುತ್ತಾರೆ.


ಇನ್ನು ಕೆಲವರು ಕಷ್ಟಗಳನ್ನು ಸವಾಲುಗಳಾಗಿ ಸ್ವೀಕರಿಸಿ, ಸಮಸ್ಯೆಗಳನ್ನು ಅವಕಾಶಗಳನ್ನಾಗಿ ಪರಿವರ್ತಿಸುತ್ತಾ ಸಾಗಿ ಸಾಧಕರೆನಿಸುತ್ತಾರೆ.ಮುಖ್ಯವಾಗಿ ಜೀವನ ಕಲಿಸುವ ಪಾಠಗಳನ್ನು ನೋಡುವ ನಮ್ಮ ದೃಷ್ಟಿಕೋನ ಬದಲಾಗಬೇಕು. ವಿಶಾಲವಾದ ಚಿಂತನೆಗಳು ನಮ್ಮ ವ್ಯಕ್ತಿತ್ವದ ಬೆಳವಣಿಗೆಗೆ ಸಹಕಾರಿಯಾಗುತ್ತವೆ.

ಉದಯರಶ್ಮಿ ದಿನಪತ್ರಿಕೆ

## ಕಾವ್ಯರಶ್ಮಿ

– ಮಾಲತಿ ಜೈನ್

("ನಮ್ಮ ಕಥಾ ಅರಮನೆ" ಬರಹಗಾರರು)



### ಆಕಾಶದೀಪ



ಆಕಾಶದೀಪವಾದೆ
ನಿಲುಕದ ನಕ್ಷತ್ರವಾದೆ
ನನ್ನಯ ಮನಸೆಳೆದೆ
ಹೃದಯದಿ ಮನೆಮಾಡಿದೆ

ನಿನ್ನದೇ ನೆನಪಲ್ಲಿ ಬೆಂದೆ
ಎಲ್ಲಿ ಮರೆಯಾಗಿ ಹೋದೆ
ನನ್ನೊಲವು ತಿಳಿಯದಾದೆ
ಬೇರೊಬ್ಬರ ಮನೆಬೆಳಗಿದೆ

# ಡಿ.ಎಸ್.ಪಾಟೀಲ ಪಪೂ ಕಾಲೇಜು 98.43% ಫಲಿತಾಂಶ

**ಉದಯರಶ್ಮಿ ನ್ಯೂಸ್**

ಸಿಂದಗಿ: ತಾಲೂಕಿನ ಕನ್ನೊಳ್ಳಿ ಗ್ರಾಮದ ಶ್ರೀ.ಡಿ.ಎಸ್.ಪಾಟೀಲ ಪದವಿ ಪೂರ್ವ ಮಹಾವಿದ್ಯಾಲಯದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶ ಪ್ರಕಟಣೆಗೊಂಡಿದ್ದು ಕಾಲೇಜಿನ ಫಲಿತಾಂಶ 98.43% ರಷ್ಟು ದಾಖಲಾಗಿದೆ.

ಕುಮಾರಿ – ಸೌಮ್ಯ ಗೌರ 569/600 ಪ್ರಥಮ ಸ್ಥಾನ, ಕುಮಾರಿ – ಶಶಿಕಲಾ ಮಂಗೊಂಡಿ –568/600 ದ್ವಿತೀಯ ಸ್ಥಾನ, ಕುಮಾರಿ – ಪ್ರೀಯಾ ಸುಂಟ್ಯಾಣ 557/600 ತೃತೀಯ ಸ್ಥಾನ ಪಡೆದಿದ್ದಾರೆ. ಕಾಲೇಜಿನಲ್ಲಿ ಒಟ್ಟು 64 ವಿದ್ಯಾರ್ಥಿಗಳು ಪರೀಕ್ಷೆಗೆ ಹೆಸರು ನೋಂದಾಯಿಸಿದ್ದರು ಅದರಲ್ಲಿ 63 ವಿದ್ಯಾರ್ಥಿಗಳು ತೇರ್ಗಡೆ ಹೊಂದ್ದಿದ್ದಾರೆ. ಅದರಲ್ಲಿ 32 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ (ಡಿಸ್ಟಿಂಕ್ಷನ್), ಮತ್ತು 31 ವಿದ್ಯಾರ್ಥಿಗಳು ಉತ್ತಮ ಶ್ರೇಣಿ (ಪ್ರಥಮ ಶ್ರೇಣಿ)ಯಲ್ಲಿ ಉತ್ತೀರ್ಣರಾಗಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಈ ಸಾಧನೆ ತೋ–ರಿದ ವಿದ್ಯಾರ್ಥಿಗಳಿಗೆ ಕಾಲೇಜಿನ



ಸೌಮ್ಯ ಗೌರ 94.83% | ಶಶಿಕಲಾ ಮಂಗೊಂಡಿ 94.66% | ಪ್ರೀಯಾ ಸುಂಟ್ಯಾಣ 92.83%

ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ ಸಿದ್ದನಗೌಡ ಪಾಟೀಲ ಹಾಗೂ ಆಡಳಿತ ಮಂಡಳಿಯ ಸರ್ವ ಸದಸ್ಯರು, ಕಾಲೇಜಿನ ಪ್ರಚಾರ್ಯರಾದ ಶ್ರೀ ಐ.ಡಿ.ಪಡಶೆಟ್ಟಿ ಹಾಗೂ ಉಪನ್ಯಾಸಕ ಸಿಬ್ಬಂದಿ ವರ್ಗ ಹರ್ಷ ವ್ಯಕ್ತಪಡಿಸಿ ವಿದ್ಯಾರ್ಥಿಗಳಿಗೆ ಅಭಿನಂದಿಸಿದ್ದಾರೆ

# ಶ್ರೀ ಸಿದ್ದರಾಮೇಶ್ವರ ಕಾಲೇಜಿಗೆ ಶೇ.ನೂರು ಫಲಿತಾಂಶ

**ಉದಯರಶ್ಮಿ ನ್ಯೂಸ್**

ಮೋರಟಗಿ: ಈ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಗ್ರಾಮದ ಶ್ರೀ ಸಿದ್ದರಾಮೇಶ್ವರ ಶಿಕ್ಷಣ ಸೇವಾ ಸಮೀತಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಕಲಾ ವಿಭಾಗದಲ್ಲಿ 103 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು 103 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಕಾಲೇಜಿನ ಕೀರ್ತಿ ಹೆಚ್ಚಿಸಿದ್ದಾರೆ.

1) ರಕ್ಷಿತಾ ಗೋಗಿ 579(96.50%) 2) ಆಕಾಶ ಮದರಿ 578 (96.33%) 3) ಮಹೇಶ್ ತಳವಾರ 575(95.83%)

ಮೂರು ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಪಡೆದು ಕಾಲೇಜಿಗೆ ಪ್ರಥಮ ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದಿದ್ದಾರೆ.

ಉತ್ತಮ ಸಾಧನೆ ಮಾಡಿ ಕಾಲೇಜಿನ ಕೀರ್ತಿ ಹೆಚ್ಚಿಸಿದ ಎಲ್ಲ ವಿದ್ಯಾರ್ಥಿಗಳಿಗೆ ಶ್ರೀಸಿದ್ದರಾಮೇಶ್ವರ ಶಿಕ್ಷಣ ಸಂಸ್ಥೆಯ ಚೇರಮೇನ್ ರು ಕಾರ್ಯದರ್ಶಿಗಳು ನಿರ್ದೇಶಕರುಗಳು ಮತ್ತು ಆಡಳಿತ ಮಂಡಳಿ ಶಿಕ್ಷಕರ ವರ್ಗ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

# ಸಿಡಿಲು ಬಡಿದು ಎಮ್ಮೆ ಸಾವು

**ಉದಯರಶ್ಮಿ ನ್ಯೂಸ್**



ಚಡಚಣ: ಪಟ್ಟಣದ ಹೊರವಲಯದಲ್ಲಿರುವ ಸಂಗಪ್ಪ ಪಾವಲೆ ಅವರ ತೋಟದಲ್ಲಿ ಬಿದ್ದ ಸಿಡಿಲಿಗೆ ಎಮ್ಮೆ ಸಾವನಪ್ಪಿದ ಘಟನೆ ಬುಧವಾರ ಸಂಜೆ ನಡೆದಿದೆ.

ಘಟನೆಯಲ್ಲಿ ಯಾವುದೇ ಜನರಿಗೆ ಪ್ರಾಣ ಹಾನಿಯಾಗಿಲ್ಲ ಎಂದು ತಿಳಿದು ಬಂದಿದೆ.

# ಕನ್ನಡದ ಮಹಿಳಾ ಸಾಹಿತಿಗಳು

**ವೀಣಾಂತರಂಗ**



–ವೀಣಾ ಎಚ್. ಪಾಟೀಲ್, ಮುಂಡರಗಿ

ಇಡೀ ಜಗತ್ತಿನ ವಿವಿಧ ಭಾಷೆಗಳ ಸಾಹಿತ್ಯವನ್ನು ಗಮನಿಸಿದರೆ ಕನ್ನಡ ಸಾಹಿತ್ಯ ಅತ್ಯಂತ ಶ್ರೀಮಂತವಾಗಿದೆ ಎಂಬುದು ನಮ್ಮ ಅರಿವಿಗೆ ಬರುತ್ತದೆ ಬಹುಶಹ ಕನ್ನಡ ಸಾಹಿತ್ಯದಲ್ಲಿರುವ ಕಥೆ, ಕವನ, ಕಾವ್ಯ, ವಚನಗಳು, ಕೀರ್ತನೆಗಳು ಚಿಂತನಗಳು, ಸಿದ್ಧಾಂತಗಳು, ಜನಪದ ಸಾಹಿತ್ಯ, ಪುರಾಣಗಳು ಪುಣ್ಯ ಕಥೆಗಳು,ಹನಿಗವನಗಳು ಮಿಡಿಗವನಗಳು, ಚುಟುಕಗಳು, ಸಾಂಗತ್ಯಗಳು,ದ್ವಿಪದಿಗಳು, ತ್ರಿಪದಿಗಳು, ಸುನೀತಗಳು ನಾಟಕಗಳು ಹೀಗೆ ಹತ್ತು ಹಲವು ಪ್ರಕಾರಗಳನ್ನು ನಾವು ಕಾಣಬಹುದು.

ತಾವು ಬದುಕುತ್ತಿರುವ ರೀತಿ ಸಮಾಜದ ನೀತಿ ಹೆಣ್ಣು ಮಕ್ಕಳಿಗೆ ಇದ್ದ ಸೂಕ್ಷ್ಮವಾದ ಸಂವೇದನೆಗಳು ಆಕೆಯ ಆಸೆಯ ಆಕಾಂಕ್ಷೆಗಳು ತಲ್ಲಣಗಳು ಪ್ರೀತಿ ಪ್ರೇಮ ಕರುಣೆ ಮುಂತಾದ ನವರಸಗಳನ್ನು ಸು–ರಿಸುವ ಕೆಲವೊಮ್ಮೆ ಸಮಾಜವನ್ನು ಬಡಿದೆಚ್ಚರಿಸುವ ಸಾಹಿತ್ಯ ಹೆಣ್ಣು ಮಕ್ಕಳಿಂದ ಸೃಷ್ಟಿಯಾಯಿತು. ಈ ರೀತಿ ಸಾಹಿತ್ಯ ಸೃಷ್ಟಿಯಾಗುವ ಮುನ್ನ ಕಂತಿ ಎಂಬ ಮಹಿಳೆ ಮೊಟ್ಟಮೊದಲ ಬಾರಿ ಕವನಗಳನ್ನು ರಚಿಸಿದಳು ಎಂಬುದು ನಮ್ಮ ಗಮನಕ್ಕೆ ಬರುತ್ತದೆ, ಆದರೂ ಆಕೆಯ ಯಾವುದೆ ಕೃತಿಗಳು ಇಂದಿನವರೆಗೂ ಲಭ್ಯವಾಗಿಲ್ಲ. ಆದ್ದರಿಂದ ವಚನಕಾರ್ತಿ, ಕದಳಿಯ ಕರ್ಪೂರ ಎಂದು ಕರೆಯುವ ಅಕ್ಕಮಹಾದೇವಿ ಕನ್ನಡದ ಮೊದಲ ಕವಯತ್ರಿ ಎಂದೆನಿಸಿಕೊಂಡಳು. ತನ್ನ ಸುತ್ತಣ ಸಮಾಜದಲ್ಲಿ ಹಾಸು ಹೊಕ್ಕಾಗಿರುವ ಢಾಂಬಿಕತೆ, ಮೂಢನಂಬಿಕೆ ಅಶ್ರದ್ಧೆ ಅಸಮಾನತೆಗಳನ್ನು ವಿರೋಧಿಸುತ್ತಾ ನಿಜವಾದ ಭಕ್ತಿ ಜ್ಞಾನ ವೈರಾಗ್ಯಗಳನ್ನು ಕುರಿತು ವಚನಗಳ ಮೂಲಕ ಪ್ರಸ್ತುತ ಪಡಿಸಿದಳು. ಸಮಾಜದ ಜನರ ಮೌಲ್ಯವನ್ನು ಪ್ರಶ್ನಿಸುತ್ತ, ತಪ್ಪಿದಲ್ಲಿ ತಿದ್ದುವ ಕೆಲಸವನ್ನು ಮಾಡಿದಳು. .ವಚನ ಸಾಹಿತ್ಯದ ಮೂಲಕ ನಮ್ಮ ಕನ್ನಡ ಸಾಹಿತ್ಯ ಪ್ರಾರಂಭವಾಯಿತು ಎಂದು ಹೇಳಿದರೆ ತಪ್ಪಿಲ್ಲ. ಮನೆ ಮನೆಗಳಲ್ಲಿ ಗೃಹಿಣೀಯರಾಗಿ ತಮ್ಮ ಕಾಯಕ ದಾಸೋಹಗಳನ್ನು ಮಾಡುತ್ತಿದ್ದ ಮಹಿಳೆಯರು ಅನುಭವ ಮಂಟಪದ ರೂವಾರಿಗಳ ಸಾಂಗತ್ಯದಲ್ಲಿ ತಮ್ಮ ಅನುಭವವನ್ನು ವಚನಗಳ ರೂಪದಲ್ಲಿ ರಚಿಸಿದರು.

ಸುಮಾರು 36ಕ್ಕೂ ಹೆಚ್ಚು ಜನ ಶಿವಶರಣೆಯರು ವಚನಗಳನ್ನು ರಚಿಸಿದರು.

ಅಮ್ಮುಗೆರಾಯ ಅಮ್ಮಗೆ ರಾಯಮ್ಮ, ರೆಮ್ಮವ್ವ, ಅಕ್ಕನಾಗಮ್ಮ, ಆಯ್ದಕ್ಕಿ ಲಕ್ಕಮ್ಮ, ಕದಿರ ರೆಮ್ಮವ್ವೆ, ಕನ್ನಡಿ ಕಾಯಕದ ರೆಮ್ಮುವ್ವೆ, ಉರಿಲಿಂಗಪೆದ್ದಿಗಳ ಪತ್ನಿ ಕಾಳವ್ವೆ, ಕಾಲ ಕಣ್ಣೀ ಕಾಮವ್ವ, ಬಸವಯ್ಯನವರ ಧರ್ಮಪತ್ನಿ ಕಾಳವ್ವೆ, ಸಿದ್ಧಬುದ್ದಯ್ಯನವರ ಪತ್ನಿ ಕಾಳವ್ವೆ, ಕೇತಲದೇವಿ, ಕೊಟ್ಟಣದ ಸೋಮವ್ವೆ, ಮೋಳಿಗೆ ಮಹಾದೇವಿ, ಗಂಗಮ್ಮ, ಗಂಗಾಂಬಿಕೆ, ಗಜೇಶ ಮಸಣಯ್ಯನವರ ಪತ್ನಿ ಗುಪ್ತ ವಚನಕಾರ್ತಿ, ದುಗ್ಗಳೆ ನೀಲಾಂಬಿಕೆ,ಬೊಂತಾದೇವಿ, ಮಸಣಮ್ಮ, ರೇಕಮ್ಮ, ಲಕ್ಷ್ಮಮ್ಮ, ಹಡಪದ ಅಪ್ಪಣ್ಣನವರ ಧರ್ಮಪತ್ನಿ ಲಿಂಗಮ್ಮ, ವೀರಮ್ಮ, ಶರಣೆ ಸತ್ಯಕ್ಕ, ಸೂಳೆ ಸಂಕವ್ವೆ, ದೂಪದ ಗೊಗ್ಗವ್ವೆ, ಅಕ್ಕಮಹಾದೇವಿ ಮತ್ತು ಮುಕ್ತಾಯಕ್ಕ ಹೀಗೆ 30ಕ್ಕೂ ಹೆಚ್ಚು ಜನ ಮಹಿಳಾ ವಚನಕಾರ್ತಿಯರು ವಚನಗಳನ್ನು ರಚನೆ ಮಾಡಿದ್ದು ಕಲ್ಯಾಣದ ಅನುಭವ ಮಂಟಪ ಜಗತ್ತಿಗೆ ನೀಡಿದ ದೊಡ್ಡ ಕಾಣಿಕೆಯಾಗಿದೆ. ಸಮಾಜದ ಅನಿಷ್ಟ ಮತ್ತು ಸಂಕುಚಿತ ರೀತಿ ನೀತಿಗಳನ್ನು ಜಾತಿಭೇದಗಳನ್ನು ಲಿಂಗ ಭೇದಗಳನ್ನು ತೊಡೆದು ಹಾಕುವ ಚಿಂತನೆ ಮಾಡಿದ ಅಂದಿನ ವಚನಕಾರ್ತಿಯರು ಇಂದಿನ ಮಹಿಳಾ ವಾದಕ್ಕೆ, ಸ್ತ್ರೀಪರ ಚಿಂತನೆಗಳಿಗೆ ಮೊದಲ ಮೆಟ್ಟಿಲನ್ನು ಕಟ್ಟಿಕೊಟ್ಟಿದ್ದಾರೆ. ಅಂತೆಯೇ ಅಕ್ಕಮಹಾದೇವಿ ಕನ್ನಡ ಸಾಹಿತ್ಯದ ಮೊದಲ ಬಂಡಾಯ ಲೇಖಕಿಯಾಗಿದ್ದಾಳೆ.

ಕನ್ನಡ ಸಾಹಿತ್ಯದಲ್ಲಿ ಮೊಟ್ಟ ಮೊದಲ ಸಾಹಿತಿಯೆಂದು ನಾವು ವಚನಕಾರ್ತಿ ಅಕ್ಕಮಹಾದೇವಿಯನ್ನು ಗುರುತಿಸುತ್ತೇವೆ.ಆದರೆ ಇದಕ್ಕೂ ಮುನ್ನ ಕಂತಿ ಎಂಬ ಓರ್ವ ಮಹಿಳೆ ಕವನಗಳನ್ನು ರಚಿಸಿದ್ದಳೆಂಬುದು ಎಲ್ಲ–ರಿಗೂ ಗೊತ್ತಿದೆ ಆದರೆ ಆಕೆಯ ಯಾವುದೇ ಕವನ ಇಲ್ಲವೇ ಲೇಖನಗಳು ನಮಗೆ ಇನ್ನೂವರೆಗೂ ಸಿಕ್ಕಿಲ್ಲ. ಇನ್ನು ವಿಜಯನಗರ ಸಾಮ್ರಾಜ್ಯದ ಅಚ್ಚುತರಾಯನ ಹಿರಿಯ ಪತ್ನಿ ರಾಣಿ ತಿರುಮಲಾಂಬೆ ತನ್ನ ಪತಿಯ ಎರಡನೇ ಮದುವೆಯ ಕುರಿತು ವರದಾಂಬಿಕ ಪರಿಣಯ ಕೃತಿಯನ್ನು ರಚಿಸಿದಳು.

ವಿಜಯನಗರ ಅರಸರಾದ ಕಂಪಣ್ಣನ ರಾಣಿ ಗಂಗಾಂಬಿಕೆ ಕೂಡ ಸಂಸ್ಕೃತದಲ್ಲಿ ಮಧುರ ವಿಜಯ ಎಂಬ ಕೃತಿಯನ್ನು ರಚಿಸಿದಳು. ಇದು ಕನ್ನಡದಲ್ಲಿ ವೀರಕಂಪಣ ರಾಯ ಚರಿತೆ ಎಂಬ ಹೆಸರಿನಲ್ಲಿ ತರ್ಜುಮೆಗೊಂಡಿದೆ. ರಘುನಾಥ ನಾಯಕನ ಆಸ್ಥಾನದಲ್ಲಿ ಮಧುರ ವಾಣಿ ಎಂಬ ಕವಯತ್ರಿ ಇದ್ದಳು ಎಂದು ತಿಳಿದು ಬರುತ್ತದೆ, ಮುಂದೆ ಮೈಸೂರಿನ ಚಿಕ್ಕದೇವರಾಜ ಒಡೆಯರ ಆಸ್ಥಾನದಲ್ಲಿ ಸಂಚಿಯ ಹೊನ್ನಮ್ಮ ಮತ್ತು ಶೃಂಗಾರಮ್ಮ ಎಂಬ ಕವಯತ್ರಿಯರಿದ್ದರು.

ಸಂಚಿಯ ಹೊನ್ನಮ್ಮ ಹದಿಬದಿಯ ಧರ್ಮ ಎಂಬ ಕಾವ್ಯವನ್ನು ಸಾಂಗತ್ಯದಲ್ಲಿ ರಚಿಸಿದ್ದಾಳೆ. ಸಾಂಪ್ರದಾಯಿಕ ಗೃಹಿಣಿ ಲಕ್ಷಣಗಳನ್ನು ವಿವ–ರಿಸಿರುವ ಸಂಚಿಯ ಹೊನ್ನಮ್ಮ ಹೆಣ್ಣು ಮಕ್ಕಳು ಸಂಪೂರ್ಣವಾಗಿ ಪುರುಷ ಪ್ರಧಾನ ವ್ಯವಸ್ಥೆಯನ್ನು ಒಪ್ಪಿಕೊಂಡು ಪುರುಷನ ಸುಖ ಸಂತೋಷಗಳಿಗಾಗಿ ದುಡಿದರೆ ಕುಟುಂಬದಲ್ಲಿ ಸುಖ ಸಂತೋಷ ನೆಮ್ಮದಿ ನೆಲೆಯೂರಿರುತ್ತದೆ ಎಂಬ ಅಭಿಪ್ರಾಯವನ್ನು ತನ್ನ ಕೃತಿಯಲ್ಲಿ ತೋರಿದ್ದಾಳೆ.

ಆಕೆಯ ಕವನದ ಸಾಲುಗಳೇ ಹೆಣ್ಣು ಶಿಶು ಉಳಿಸಿ ಯೋಜನೆಯ ಜಾಹೀರಾತಿನಲ್ಲಿ ಬಳಸಿಕೊಂಡಿದ್ದರು.ಹೆಣ್ಣಲ್ಲವೇ ನಮ್ಮನೆಲ್ಲ ಪಡೆದ ತಾಯಿ ಹೆಣ್ಣಲ್ಲವೇ ನಮ್ಮನೆಲ್ಲ ಹಡೆದವಳು ಹೆಣ್ಣು ಹೆಣ್ಣೇಂದೇತಕೆ ಬೀಳುಗಳವರು ಕಣ್ಣು ಕಾಣದ ಗಾವಿಲರು ಎಂದು ಹೆಣ್ಣು ಕುಲವನ್ನು ಹೀಗಳೆಯುವ ಜನರಿಗೆ ಆಕೆ ಉತ್ತರಿಸಿದರೆ ಕುವರನಾದರೆ ಬಂದ ಗುಣವೇನದರಿಂದ ಕುವ–ರಿಯಾದೊಡೆ ಕುಂದೇನು ಎಂದು ಅತ್ಯಂತ ಸೌಮ್ಯವಾಗಿ ಸ್ತ್ರೀ ಪುರುಷ ತಾರತಮ್ಯವನ್ನು ಪ್ರಶ್ನಿಸಿದ್ದಾಳೆ..

ಗಲಗಲಿಯ ಅವ್ವ ಹರಪನಹಳ್ಳಿಯ ಭೀಮವ್ವ ಬಿಜಾಪುರದ ಪ್ರಯಾಗಬಾಯಿ, ಂುಂ ಶೀ ದಾ ಬಾ ಯಿಂ ಅಂಬಾಬಾಯಿ ರುಕ್ಮಿಣಿ ಬಾಯಿ ಮುಂತಾದವರು ಹಲವಾರು ಕೀರ್ತನೆಗಳನ್ನು ರಚಿಸಿದ್ದಾರೆ. ಗೋಪಾಲಕೃಷ್ಣ ವಿಠಲ ಎಂಬ ಅಂಕಿತನಾಮದಲ್ಲಿ 400ಕ್ಕೂ ಹೆಚ್ಚು ಕವನಗಳನ್ನು, ದ್ವಿಪದಿ ಛಂದಸ್ಸಿನಲ್ಲಿ ರಾಮಾಯಣವನ್ನುರಚಿಸಿರುವ ಚಿತ್ರದುರ್ಗದ ಅಂಬಾಬಾಯಿಯ ಕುರಿತು ಇತ್ತೀಚೆಗೆ ಮಹತ್ತರ ದಾಖಲೆಗಳು ದೊರೆತಿದ್ದು ಆಕೆಯ ಹಾಡುಗಳ ಕ್ಯಾಸೆಟ್ 2003 ರಲ್ಲಿ ಬಿಡುಗಡೆಯಾಗಿದೆ.

ಇನ್ನು ಸ್ತ್ರೀಪರ ಚಿಂತನೆಯನ್ನು ಹೊಂದಿರುವ ಜಾನಪದ ಮಹಿಳೆಯರ ಅಕ್ಕರೆಯ ಆಡಂಬೊಲ. ತಮ್ಮ ಸುಖ ದುಃಖ ನೋವು ನಲಿವು ಅಕ್ಕರೆ ಹಂಬಲ ಬಾಳಿನ ಏರಿಳಿತಗಳು, ಹೆಣ್ಣು ಮಕ್ಕಳ ಕುರಿತಾದ ನೂರಾರು ಸಮ್ಮಿಶ್ರ ಭಾವಗಳನ್ನು ಜಾನಪದದಲ್ಲಿ



ನಾವು ಕಾಣಬಹುದು. ಇದು ಕೂಡ ಸಾಕಷ್ಟು ಅಜ್ಞಾತ ಮಹಿಳೆಯ–ರಿಂದ ರಚಿತವಾಗಿವೆ. ಸೋಬಾನೆ ಪದ,ಹಂತಿಯ ಪದ,ಬೀಸುವ ಕುಟ್ಟುವ ಸಮಯದಲ್ಲಿ ರಚಿತವಾದ ಪದಗಳು ಹೀಗೆ ಹತ್ತು ಹಲವು ಜಾನಪದ ರಚನೆಗಳು ಜನರಿಂದ ಜನರ ಬಾಯಿಗೆ ಹರಿದು ಬಂದಿವೆ.

ಇನ್ನು ಮೈಸೂರು ದೊರೆಗಳಾದ ಕೃಷ್ಣರಾಜ ಒಡೆಯರ್ ಅವರ ಪತ್ನಿ ಚೆಲುವಾಂಬೆಯವರು ವರನಂದಿ ಕಲ್ಯಾಣ ಎಂಬ ಕೃತಿಯನ್ನು ರಚಿಸಿದರು. ದಿಲ್ಲಿಯ ಬಾದಶಹನ ಪುತ್ರಿ ವರನಂದಿ ಮೇಲುಕೋಟೆಯ ಚೆಲುವನಾರಾಯಣ ಸ್ವಾಮಿಯನ್ನು ಹಿಂಬಾಲಿಸಿ ಬಂದು ಮದುವೆಯಾದದ್ದು ಈ ಕಾವ್ಯದ ವಸ್ತು. ನಿಜವಾಗಿಯೂ ಇದೊಂದು ಅದ್ಭುತ ಕೃತಿ ಇದರ ಅನುವಾದವನ್ನು ಓದಿ ಸಣ್ಣದೊಂದು ಲೇಖನವನ್ನು ನಾನು ಕೂಡ ಬರೆದಿದ್ದೇನೆ.

ಇನ್ನು ಹೊಸಗನ್ನಡದ ಸಾಹಿತ್ಯಕ್ಕೆ ಬಂದರೆ ನಂಜನಗೂಡು ತಿರುಮಲಾಂಬ, ಕೊಡಗಿನ ಗೌರಮ್ಮ ಸರಸ್ವತಿ ರಾಜವಾಡೆ , ಹೆಚ್ ವಿ ಸಾವಿತ್ರಮ್ಮ, ಶ್ಯಾಮಲಾದೇವಿ ಬೆಳಗಾಂವ್ಕರ್, ಜಯದೇವಿತಾಯಿ ಲಿಗಾಡೆ, ತ್ರಿವೇಣಿ, ಎಂ.ಕೆ .ಇಂದಿರಾ, ಅನುಪಮಾ ನಿರಂಜನ್, ವೈದೇಹಿ, ಸಾಯಿಸುತೆ, ಎಚ್ ಜಿ ರಾಧಾದೇವಿ, ಸರೋಜಿನಿ ಮಹಿಷಿ ಶೃಂಗಾರಮ್ಮ, ವೀಣಾ ಶಾಂತೇಶ್ವರ, ಪದ್ಮಾ ಶೆಣೈ ,ಎ□□□ಸ್ ಪಾರ್ವತಿ, ಶಾಂತದೇವಿ ಮಾಳವಾಡ, ಸಾರಾ ಅಬುಬಕರ್, ಸಬಿಹ ಭೂಮಿ ಗೌಡ, ನೇಮಿಚಂದ್ರ, ಚಿ.ನ. ಮಂಗಳ,, ಸಂಧ್ಯಾ ಪೈ, ಸುಧಾ ಮೂರ್ತಿ ಹೀಗೆ ಪಟ್ಟಿ ಮುಂದುವರೆಯುತ್ತಾ ಹೋಗುತ್ತದೆ. ಇದೀಗ ನೂರಾರು ಸಾವಿರಾರು ಲೇಖಕಿಯರು ಕಂಡು ಬರುತ್ತಾರೆ. ಕನ್ನಡ ಸಾಹಿತ್ಯ ಈ ಎಲ್ಲ ಲೇಖಕರ ಕಥೆ, ಕವನ, ಕಾದಂಬರಿ, ಹಾಸ್ಯ, ಲಲಿತ ಬರಹ, ರಸಾಯನ,ವಿಡಂಬನೆ, ವಿಮರ್ಶೆ, ಸಂಶೋಧನಾ ಬರಹ,ಸಾಮಾಜಿಕ, ಧಾರ್ಮಿಕ ಮತ್ತು ವೈಜ್ಞಾನಿಕ ಬರಹಗಳಿಂದ ಅತ್ಯಂತ ಶ್ರೀಮಂತವಾಗಿದೆ. ಕೇವಲ ಅಡುಗೆ ಮನೆ ಸಾಹಿತ್ಯ ಎಂದು ಹೆಣ್ಣು ಮಕ್ಕಳು ರಚಿಸುತ್ತಿದ್ದ ಸಾಹಿತ್ಯವನ್ನು ಹೀಗಳೆಯುತ್ತಿದ್ದ ಜನರಿಗೆ ಸವಾಲು ಹಾಕುವಂತೆ ಮಹಿಳೆಯರು ಪ್ರಬುದ್ಧವಾಗಿ ಬರೆಯುತ್ತಿದ್ದಾರೆ. ಆರ್ಥಿಕ, ಸಾಮಾಜಿಕ, ರಾಜಕೀಯ, ಮನರಂಜನೆ, ಕ್ರೀಡೆ, ವೈದ್ಯಕೀಯ, ವಿಜ್ಞಾನ, ಪ್ರವಾಸ ಸಾಹಿತ್ಯ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ನಿರತರಾಗಿರುವ ಮಹಿಳೆಯರ ಕು–ರಿತು ಮಹಿಳೆಯರೇ ಲೇಖನಗಳನ್ನು ಬರೆಯುತ್ತಿದ್ದಾರೆ. ಸೂಕ್ಷ್ಮವಾದ ಸ್ತ್ರೀ ಸಂವೇದನೆಗಳ ಜೊತೆಗೆ ಸಾಮಾಜಿ–ಕ ಮತ್ತು ಸಾಂಸ್ಕೃತಿಕ ಪರಿಸರದ ಕುರಿತು ಸೂಕ್ತ ಅವಲೋಕನದ ಜೊತೆ ಜೊತೆಗೆ ಸ್ತ್ರೀ ಸಹಜವಾದ ಕುತೂಹಲ ಆಸಕ್ತಿಗಳು, ಹೆಣ್ಣು ಜೀವನದ ತುಡಿತ ಮಿಡಿತಗಳು ಅವರ ಮನೋದೈಹಿಕ ವ್ಯತ್ಯಾಸಗಳು ಹೀಗೆ ಹತ್ತು ಹಲವು ಹರವುಗಳಲ್ಲ ಸಾಹಿತ್ಯವನ್ನು ಅವರು ಹೊರ ತರುತ್ತಿದ್ದಾರೆ.

ಹೊಸಗನ್ನಡದ ಮೊದಲ ಲೇಖಕಿ ಎಂದು ಪ್ರಖ್ಯಾತರಾದವರು ತಿರುಮಲಾಂಬ. ನಂಜನಗೂಡಿನ ವಕೀಲ ವೆಂಕಟ ಕೃಷ್ಣ ಅಯ್ಯಂಗಾರ ಎಂಬವರ ಪುತ್ರಿ ತಿರುಮಲಂಬ ಸ್ತ್ರೀ ಕುಲದ ಏಳಿಗೆಗೆ ಹಗಲಿರುಳು ಶ್ರಮಿಸಿದವರು ಸಂಪಾದಕಿಯಾಗಿ ಪ್ರಕಾಶಕಿಯಾಗಿ ಮುದ್ರಕಿಯಾಗಿ ಆಕೆ ಕಾರ್ಯ ನಿರ್ವಹಿಸಿದರು ಆದರೆ ಶಾಂತಾದೇವಿ ಎಂಬ ಇನ್ನೋರ್ವ ಹೊಸ ಕನ್ನಡದ ಲೇಖಕಿ ನಂಜನಗೂಡು ತಿರುಮಲಾಂಬ ಅವರಿಗಿಂತಲೂ ಮುಂಚೆ ಸಾಹಿತ್ಯ ರಚನೆ ಮಾಡಿದ್ದಾರೆ ಎಂಬುದು ಇತ್ತೀಚಿಗೆ ತಿಳಿದು ಬಂದಿದೆ.

ಕನ್ನಡದಲ್ಲಿ ಹಾಸ್ಯ ಸಾಹಿತ್ಯವನ್ನು ಬರೆದವರಲ್ಲಿ ಟೀ ಸುನಂದಮ್ಮ, ನುಗ್ಗೆಹಳ್ಳಿ ಪಂಕಜ, ಭುವನೇಶ್ವರಿ ಹೆಗಡೆಯವರು ಪ್ರಖ್ಯಾತರು. ನಾವು ಚಿಕ್ಕವರಿದ್ದಾಗ ಸುಧಾ, ತರಂಗ ಮುಂತಾದ ವಾರಪತ್ರಿಕೆಗಳಲ್ಲಿ ಇವರ ಲೇಖನಗಳು ಸದಾ ಪ್ರಕಟವಾಗುತ್ತಿದ್ದವು. ಸಾಹಿತ್ಯ ಕ್ಷೇತ್ರದಲ್ಲಿ ಮಹಿಳೆಯರು ಬೆರಳೆಣಿಕೆಯಷ್ಟು ಇದ್ದಾಗಲೇ ಸೃಜನಶೀಲ ಹಾಸ್ಯ ಸಾಹಿತ್ಯವನ್ನು




ರಚಿಸಿದ ಟಿ ಸುನಂದಮ್ಮನವರು ಸುಮಾರು 25 ವರ್ಷಗಳ ಕಾಲ ನಿರಂತರವಾಗಿ ರಾಶಿಯವರ ಕೊರವಂಜಿ ಪತ್ರಿಕೆಗೆ ಬರೆಯುತ್ತಿದ್ದರು. ಅವರ ಕಲ್ಪನೆಯ ಮೈಲಾರಯ್ಯ ಮತ್ತು ಸರಸು ಎಂಬ ದಂಪತಿಗಳನ್ನು ಅಂದಿನ ಕಾಲಮಾನದ ವರ್ತಮಾನದ ಘಟನೆಗಳನ್ನು ತಮ್ಮ ಹಾಸ್ಯ ಬರಹದ ವಸ್ತುಗಳನ್ನಾಗಿ ಆಕೆ ಬಳಸುತ್ತಿದ್ದರು.

ಪೆಪ್ಪರ್ಮೆಂಟು ಜಂಬದ ಚೀಲ ನನ್ನ ಅತ್ತೆಗಿರಿ ಮುತ್ತಿನ ಚಂಡು ಮುಂತಾದ ಹಾಸ್ಯ ಸಂಕಲನಗಳನ್ನು ಪ್ರಕಟಿಸಿದ ಅವರು ಗಂಭೀರ ಸಾಹಿತ್ಯದಲ್ಲೂ ಕೈಯಾಡಿಸಿದ್ದಿದೆ.

ಶಿ ಶಿ ಮಾಳವಾಡರ ಪತ್ನಿ ಶಾಂತಾದೇವಿ ಮಾಳವಾಡ



ವೈದೇಹಿ

ಮದುವೆಯಾದ ನಂತರ ಶಿಕ್ಷಣವನ್ನು ಮುಂದುವರಿಸಿ ರಸಪಾಕದಿಂದ ಹಿಡಿದು ಕೆಳದಿ ಚೆನ್ನಮ್ಮನ ವರೆಗಿನ ಸಂಶೋಧನಾತ್ಮಕ ಕೃತಿಗಳನ್ನು ಒಳಗೊಂಡಂತೆ 26 ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ ಅವರು ಇನ್ನಿತರ ಲೇಖಕಿಯರು ಈ ಕ್ಷೇತ್ರದಲ್ಲಿ ತೊಡಗಿಕೊಳ್ಳುವಲ್ಲಿ ಸಹಾಯ ಹಸ್ತ ಚಾಚಿದ್ದಾರೆ.

1923ರ ಸಮಯದಲ್ಲಿ ತಮ್ಮ ಹಲವಾರು ನಾಟಕ ಸಣ್ಣ ಕಥೆ ಕಾವ್ಯ ಪ್ರಬಂಧಗಳ ಮೂಲಕ ಸರಸ್ವತಿ ದೇವಿಗೌಡರವರು ಪರಂಪರಾನುಗತವಾಗಿ ಸ್ತ್ರೀ ಅನುಭವಿಸುತ್ತಾ ಬರುತ್ತಿರುವ ಮೌಲ್ಯಗಳು ಮತ್ತು ಧೋರಣೆಗಳನ್ನು ಒರೆಗೆ ಹಚ್ಚಿ ನೋಡಿದ್ದಾರೆ.

ಅದೇ ಸಮಯದಲ್ಲಿ ಇನ್ನೋರ್ವ ಲೇಖಕಿ ಗೀತಾ ಕುಲಕರ್ಣಿಯವರು ಸ್ತ್ರೀ ಪುರುಷ ಸಮಾನತೆಯನ್ನು ಸಾರುವ ಹಲವಾರು ಕಥೆಗಳು ಲೇಖನಗಳು ಮತ್ತು ಕಾದಂಬರಿಗಳನ್ನು ಬರೆದಿದ್ದಾರೆ.

ತಮ್ಮೆಲ್ಲ ಕಥೆಗಳ ಮೂಲಕ ಜೀವನೋತ್ಸಾಹವನ್ನು ತೋರುತ್ತಿದ್ದ ರಾಜೇಶ್ವರಿ ನರಸಿಂಹಮೂರ್ತಿಯವರು, ಚಾ–ರಿತ್ರಿಕ ಕಾದಂಬರಿಗಳನ್ನು ಬರೆದ ಮೊದಲ ಕನ್ನಡದ ಲೇಖಕಿ ಸಿಎನ್ ಜಯಲಕ್ಷ್ಮಿ ದೇವಿ ಶಪ್ತವಾಪಿ, ಗಂಗರಸ ದುರ್ವಿನೀತ ಎಂಬ ಕಾದಂಬರಿಗಳನ್ನು ರಚಿಸಿದ್ದಾರೆ. ಅಪಾರ ವಿದ್ವತ್ ಪ್ರತಿಭೆಯನ್ನು ಹೊಂದಿದ ಸರೋಜಿನಿ ಮಹಿಷಿ ಯವರು ಗಂಭೀರ ಚಿಂತನೆಗಳನ್ನು ಹೊಂದಿರುವ ಸಾಹಿತ್ಯ ರಚನೆಯನ್ನು ಮಾಡಿದ್ದಾರೆ. ಈ ಹಿಂದೆ ಮೈಸೂರು ರಾಜರ ಆಶ್ರಯದಲ್ಲಿದ್ದ ಮಂಡ್ಯದ ಶೃಂಗಾರಮ್ಮ ಅವರು ಶ್ರೀದೇವಿ ಎಂಬ ಕಾವ್ಯನಾಮದಲ್ಲಿ ಆಗಮ ಶಾಸ್ತ್ರದ ಕುರಿತು ಲೇಖನಗಳನ್ನು ಬರೆದ ಮೊದಲ ಲೇಖಕಿಯಾಗಿ ಗುರುತಿಸಿಕೊಂಡಿದ್ದಾರೆ.

ಇನ್ನು ಜನಪ್ರಿಯತೆಯ ಆಧಾರದಲ್ಲಿ ಹೇಳುವುದಾದರೆ ಕಾದಂಬರಿಕಾರರಾದ ತ್ರಿವೇಣಿ ಎಂ ಕೆ ಇಂದಿರಾ, ಅನುಪಮಾ ನಿರಂಜನ್, ಸಾಯಿಸುತೆ, ಹೆಚ್ ಜಿ ರಾಧಾದೇವಿ ಮುಂತಾದವರು 20ನೇ ಶತಮಾನದ ಮಧ್ಯಭಾಗದಿಂದ ಹೆಚ್ಚು ಜನಪ್ರಿಯರಾಗಿದ್ದವರು.

ವೈಯುಕ್ತಿಕವಾಗಿ ನನಗೆ ತ್ರಿವೇಣಿಯವರ ಅಪಸ್ವರ, ಬೆಳ್ಳಿ ಮೋಡ ಹೂವು ಹಣ್ಣು ಬೆಕ್ಕಿನ ಕಣ್ಣು, ದೂರದ ಬೆಟ್ಟ ಹಣ್ಣೆಲೆ ಚಿಗುರಿದಾಗ ಸೋತು ಗೆದ್ದವಳು ಕೀಲು ಗೊಂಬೆ ಮುಂತಾದ ಕಾದಂಬ–ರಿಗಳು ಬಹಳ ಆಪ್ತವಾದವು. ಅದರಲ್ಲಿಯೂ ಮನೋವೈಜ್ಞಾನಿಕ ಹಿನ್ನೆಲೆಯಲ್ಲಿ ಬರೆದ ದಾಂಪತ್ಯದಲ್ಲಿ ಸಾಮರಸ್ಯವಿಲ್ಲದ ಅಪಸ್ವರ, ಚಿಕ್ಕಮ್ಮನ ಕಿರುಕುಳದಿಂದ ಮಾನಸಿಕವಾಗಿ ಸೋತು ಮತ್ತೆ ಬದುಕಿನತ್ತ ಮುಖ ಮಾಡಿದ ಬೆಕ್ಕಿನ ಕಣ್ಣು ಕಾದಂಬ–ರಿಗಳು ನನ್ನನ್ನು ಇನ್ನಿಲ್ಲದಂತೆ ಆಕರ್ಷಿಸಿದ್ದವು.

ತಮ್ಮ 45ನೇ ವಯಸ್ಸಿನಲ್ಲಿ ಬರೆಯಲು ಆರಂಭಿಸಿದ ಎಂಕೆ ಇಂದಿರಾ ಅವರ ಕಾದಂಬರಿಗಳು ವಿವಿಧ ಸಾಮಾಜಿಕ ಹಿನ್ನೆಲೆಗಳನ್ನು ತೋರುತ್ತ ವೈವಿಧ್ಯಮಯ ಮತ್ತು ರೋಚಕ ಬದುಕಿನ ಚಿತ್ರಣಗಳನ್ನು ಕೊಡುತ್ತವೆ

ಸದಾನಂದ ಎಂಬ ಇವರ ಕಾದಂಬರಿ ನನಗೆ ಅತ್ಯಂತ ಅಚ್ಚುಮೆಚ್ಚಿನದು. ಚಿಕ್ಕ ವಯಸ್ಸಿನಲ್ಲಿ ವಿಧವೆಯಾಗಿ ಮಡಿಯುಟ್ಟ ಪಣಿಯಮ್ಮ ಜೀವನವನ್ನು ಎದು–ರಿಸಿದ ರೀತಿ ಅದ್ಭುತ. ಗೆಜ್ಜೆಪೂಜೆ ಸಮಾಜದ ಅನಿಷ್ಟ ಪದ್ದತಿಯನ್ನು ವಿರೋಧಿಸಿ ಬರೆದ ಕಾದಂಬರಿ.

ವೀಣಾ ಶಾಂತೇಶ್ವರ ಅವರು ಬರೆದ ಗಂಡಸರು ಎಂಬ ಕೃತಿ ಅತಿ ಹೆಚ್ಚು ಚರ್ಚಿತಗೊಂಡ ಕೃತಿಯಾಗಿದೆ

ವೃತ್ತಿಯಿಂದ ವೈದ್ಯ ಆಗಿದ್ದ ಡಾಕ್ಟರ್ ಅನುಪಮಾ ನಿರಂಜನ್ ಕ್ಯಾನ್ಸರ್ ರೋಗದಿಂದ ಪೀಡಿತರಾಗಿದರೂ ಸರಿಸುಮಾರು 20 ವರ್ಷಗಳ ಕಾಲ ಕ್ಯಾನ್ಸರ್ ಅನ್ನು ಹಿಮ್ಮೆಟ್ಟಿಸಿದ ಸಾಹಸಿ ಲೇಖಕಿ. ಅನೇಕ ವೈದ್ಯಕೀಯ ವಿಚಾರಗಳನ್ನು ತಮ್ಮ ಲೇಖನಗಳ ಮೂಲಕ ಸರಳವಾಗಿ ಜನರಿಗೆ ವಿವರಿಸುತ್ತಿದ್ದ ಅವರ ಪರಿ ಬಹಳ ಮೆಚ್ಚುಗೆ ಗಳಿಸಿತ್ತು. ಅವರ ತಾಯಿ ಮಗು ಎಂಬ ಕೃತಿ ಇಂದಿಗೂ ಬಹುತೇಕ ಎಲ್ಲರ ಮನೆಗಳಲ್ಲಿ ಇದೆ. ಪ್ರಗತಿಪರ ನಿಲುವುಗಳನ್ನು ಹೊಂದಿದ್ದ ಡಾಕ್ಟರ್ ಅನುಪಮ ನಿರಂಜನ್ ಅವರು ಒಂದು ಘಟನೆ ಮತ್ತು ಆನಂತರ, ಮಾಧವಿ, ಒಂದು ಗಿಣಿಯ ಕಥೆ, ದಿನಕ್ಕೊಂದು ಕಥೆ, ಕೇಳು ಕಿಶೋರಿ, ದಾಂಪತ್ಯ ಗೀತೆ ಎಂಬ ಕೃತಿಗಳನ್ನು ರಚಿಸಿ ಮಹಿಳೆಯರಲ್ಲಿ ವೈದ್ಯಕೀಯ ಕುರಿತಾದ ಸಾಕಷ್ಟು ಮಾಹಿತಿಗಳನ್ನು ನೀಡಿದ್ದಾರೆ.

ಡಾಕ್ಟರ್ ವಸುಂದರ ಭೂಪತಿ ಅವರು ಕೂಡ ಅನೇಕ ವೈದ್ಯಕೀಯ ಲೇಖನಗಳನ್ನು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ಉತ್ತಮ ವಿಮರ್ಶಕರೆಂದೇ ಹೆಸರಾದ ಕಮಲ ಹಂಪನ ಅವರು ಬಾಸಿಂಗ, ಬಂದಳ ಬಡವಗ್ನಿ, ಬಿತ್ತರ ಹಾಲಿನ ಬಟ್ಟಲು ಮುಂತಾದ ಕೃತಿಗಳನ್ನು ರಚಿಸಿದ್ದಾರೆ

ವಿಜಯಾ ಅವರು 'ಎಲ್ಲಿದ್ದೇವೆ ನಾವು ಎಲ್ಲಿದ್ದೇವೆ' ಎಂಬಂತಹ ಬೀದಿ ನಾಟಕಗಳಲ್ಲಿ, ಹೆಣ್ಣು ಮತ್ತು ಗಂಡು ಮಕ್ಕಳನ್ನು ಬೆಳೆಸುವ ವಿಧಾನದಲ್ಲಿಯೇ ಇರುವ ತಾರತಮ್ಯಗಳನ್ನು ಎತ್ತಿ ತೋ–ರಿಸುವ ಕೆಲಸ ಮಾಡಿದರು.. ಅವರ ಕುದಿ ಎಸರು ಮತ್ತು ಬೆಂದಕಾಳು ಎಂಬ ಆತ್ಮ ಕಥೆಗಳನ್ನು ಬರೆದಿದ್ದು ಮೊದಲ ಕೃತಿ ಅವರ ಜೀವನದ ನಿಷ್ಠುರ ಸತ್ಯಗಳನ್ನು

ಹೇಳಿದ್ದು ಆಕೆ ಪಟ್ಟ ಬವಣೆ ಹಲವು ದಿನಗಳ ನಿದ್ದೆಯನ್ನು ಕಸಿಯುತ್ತದೆ


ನಾವೆಂದೂ ಕಂಡಿರದ ಮುಸಲ್ಮಾನ ಸಮಾಜದ ಹೆಣ್ಣು ಮಕ್ಕಳ ಮೇಲೆ ಆಗುವ ಶೋಷಣೆ ಮತ್ತು ಅವರು ಅನುಭವಿಸುವ ನೋವುಗಳನ್ನು ಸಾರಾ ಅಬೂಬಕ್ಕರ್ ಅವರು ತಮ್ಮ ಕಥೆಗಳಲ್ಲಿ ತಂದರು. ಲೇಖಕಿ ವೈದೇಹಿಯವರು ಅತ್ಯಂತ ಸೂಕ್ಷ್ಮವಾದ ಸ್ತ್ರೀ ವಾದಿ ನೆಲೆಯ ಕೃತಿಗಳನ್ನು ರಚಿಸಿದರು. ಕ್ರೌ0ಚ ಪಕ್ಷಿಗಳು, ಅಸ್ಪೃಶ್ಯರು ಮುಂತಾದ ಕೃತಿಗಳನ್ನು ಅವರು ರಚಿಸಿದರು.

ಇನ್ನು ಬಾಹ್ಯಾಕಾಶ ವಿಜ್ಞಾನಿಯಾಗಿರುವ ನೇಮಿಚಂದ್ರ ಅವರು ಅನೇಕ ವೈಜ್ಞಾನಿಕ ಲೇಖನಗಳ ಜೊತೆ ಜೊತೆಗೆ ಜರ್ಮನಿಯ ಮಹಾಯುದ್ಧದ ಸಮಯದಲ್ಲಿ ಭಾರತಕ್ಕೆ ಬಂದು ನೆಲೆಸಿದ ಯಹೂದಿ ಜನರ ಕುರಿತಾಗಿ ಬರೆದ ಕಾದಂಬರಿ 'ಯಾದೇ ವಷೆಂ ' ಅತ್ಯಂತ ಜನಪ್ರಿಯತೆಯನ್ನು ಗಳಿಸಿದೆ. ಹಿಟ್ಲರನ ಕ್ರೌರ್ಯ ಮತ್ತು ಕಾನ್ಸಂಟ್ರೇಷನ್ ಕ್ಯಾಂಪ್ ಗಳ ದುಸ್ಥಿತಿ, ಇತಿಹಾಸದ ಕ್ರೌರ್ಯದ ಪರಮಾವಧಿ ಯಾದ ಹಾಲೋಕಾಸ್ಟ್ ನಲ್ಲಿ ಬದುಕುಳಿದ



ನೇಮಿಚಂದ್ರ

ಸಂತ್ರಸ್ತರ ಕಣ್ಣೀರಿನ ಕಥೆಗಳ ನೋವು ಮನಸ್ಸನ್ನು ಕಲಕುತ್ತದೆ. ಅಷ್ಟೇನೂ ಸುಂದರ ನಲ್ಲದ ಪತಿ ಪತ್ನಿಯ ಜನ್ಮ ಭೂಮಿಯನ್ನು ನೋಡುವ, ತನ್ನವರನ್ನು ಭೇಟಿ ಮಾಡುವ ಆಕಾಂಕ್ಷೆಯನ್ನು ಈಡೇರಿಸಲು ತನ್ನೆಲ್ಲ ಹಣವನ್ನು ಖರ್ಚು ಮಾಡುವುದು, ವಿದ್ಯೆಯ ಗಂಧವೇ ಅರಿಯದ ಹೆಣ್ಣು ಮಗಳು ತನ್ನ ಮಾವನ ತಿಥಿ ಮಾಡಿದಂತೆಯೇ ತಮ್ಮ ಮನೆಯಲ್ಲಿ ಇರುವ ಅನಾಥ ಯಹೂದಿ ಹೆಣ್ಣು ಮಗಳ ತಂದೆಯ ಸಮಾಧಿಯನ್ನು ಪೂಜಿಸುವ ಮಾನವೀಯ ದೃಶ್ಯಗಳ ಚಿತ್ರಣ ಇಲ್ಲಿದೆ.. ವಿದ್ಯೆಯ ಗಂಧವೇ ಅರಿಯದ ಆ ಹೆಣ್ಣು ಮಗಳು ಮಾತುಗಳು ಯಾವುದೇ ತತ್ವ



ತಿರುಮಲಾಂಬ

ಜ್ಞಾನಿಗಿಂತ ಕಡಿಮೆ ಇಲ್ಲ. ಇವೆಲ್ಲ ಆಕೆಯ ಬದುಕಿನ ಕಲಿಕೆಗಳು.

ಪೆರುವಿನ ಕಣಿವೆಯಲ್ಲಿ ಎಂಬ ಪ್ರವಾಸ ಕಥನ ಅತ್ಯಂತ ಬಡತನ ಪರಿಸ್ಥಿತಿಯಲ್ಲಿರುವ ದಕ್ಷಿಣ ಅಮೆ–ರಿಕದ ಭೂಭಾಗದ ಕುರಿತಾದದ್ದಾದರೆ ಅದರಲ್ಲಿ ಬರುವ ವೈಜ್ಞಾನಿಕ ವಿವರಣೆಗಳು, ನಾಜ್ಕ ಲೈನ್ಗಳ ಕುರಿತಾದ ವಿವರಣೆ, ಕಾಡುಗಳ ಕುರಿತಾದ ಕುತೂಹಲ ಮತ್ತು ಎರಡು ದೇಶಗಳ ನಡುವಿನ ಗಡಿಯನ್ನು ಗುರುತಿಸುವ ಭೂ ರೇಖೆ ಒಂದು ಊರಿನ ಮಧ್ಯಭಾಗದಲ್ಲಿ ಹಾದು ಹೋಗಿರುವುದು ಮುಂತಾದ ಹಲವಾರು ವಿಷಯಗಳನ್ನು ತಿಳಿಸುತ್ತದೆ.

ಬದುಕಿನ ಹಲವಾರು ಏರಿಳಿತಗಳಲ್ಲಿ ಸಾಗುತ್ತಾ ಬದುಕನ್ನು ಬದಲಿಸುವ ಕುರಿತಾದ 'ಬದುಕು ಬದಲಿಸಬಹುದು' ಎಂಬ ಹಲವಾರು ಲೇಖನಗಳ, ಕಥೆಗಳ ಕೃತಿಗಳು ಮನಸ್ಸನ್ನು ಅರಳಿಸುತ್ತವೆ.

ಇನ್ಫೋಸಿಸ್ ಪ್ರತಿಷ್ಠಾನದ ಧರ್ಮದರ್ಶಿಯಾಗಿರುವ ಪದ್ಮಶ್ರೀ ಪುರಸ್ಕೃತ ಸುಧಾ ಮೂರ್ತಿ ಅವರು ಬರೆದ ಸಾಮಾನ್ಯರಲ್ಲಿ ಅಸಾಮಾನ್ಯರು, ಅಜ್ಜಿ ಹೇಳಿದ ಕಥೆಗಳು ದ 3000 ಸ್ಟಿಚಸ್, ಮಹಾಶ್ವೇತೆ ಇನ್ನೂ ಹಲವಾರು ಕೃತಿಗಳು ಅತ್ಯಂತ ಮಹತ್ತರವಾಗಿದ್ದು ಹಲವಾರು ಭಾಷೆಗಳಿಗೆ ಭಾಷಾಂತರಗೊಂಡಿವೆ.

ಹೀಗೆ ನೋಡುತ್ತಾ ಹೋದರೆ ಕನ್ನಡ ತಾಯಿಗೆ ಸಾಹಿತ್ಯದ ಪುಷ್ಪವನ್ನು ಅರ್ಪಿಸುತ್ತಿರುವ ಹಲವಾರು ಮಹಿಳಾಮಣಿಯರು ನಮಗೆ ಕಂಡುಬರುತ್ತಾರೆ.

ಬೆಂಗಳೂರಿನ ಎನ್ ಎಂ ಕೆ ಆರ್ ವಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದ ಚಿ.ನ.ಮಂಗಳ, ಹಂಪಿ ವಿಶ್ವವಿದ್ಯಾಲಯದ ಕುಲಪತಿಯಾಗಿ ಕಾರ್ಯನಿರ್ವಹಿಸಿದ ಮಲ್ಲಿಕಾ ಘಂಟಿ, ಶೋಷಿತ ಸಮುದಾಯದ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸಿದ ಬಿ.ಟಿ. ಲಲಿತ ನಾಯಕ್, ಸ್ವತಃ ಶೋಷಣೆಗೊಳಗಾದರೂ ಸಾಮಾಜಿಕ ನಾಟಕಗಳನ್ನು ಕೃತಿಗಳನ್ನು ರಚಿಸಿದ ವಿಜಯಮ್ಮ, ಅಪಾರ ನೋವು ನಿಷ್ಠುರ ಸಹಿಸಿದ ಬೆಳಗೆರೆ ಜಾನಕಮ್ಮ, ಹಲವಾರು ಶತಕೋಟಿ ರೂಪಾಯಿಗಳ ಅತಿ ದೊಡ್ಡ ಇನ್ಫೋಸಿಸ್ ಸಂಸ್ಥೆಯನ್ನು ಕಟ್ಟಿದ ಸುಧಾ ಮೂರ್ತಿಯವರು ಕನ್ನಡ ತಾಯಿಯ ಸಾಹಿತ್ಯದ ಸರಕ್ಕೆ ಒಂದೊಂದೇ ಮುತ್ತುಗಳನ್ನು ಜೋಡಿಸಿದವರು.

ಅಂತಿಮವಾಗಿ ಒಂದು ಮಾತನ್ನು ಹೇಳಲೇಬೇಕು. 19 ನೇ ಶತಮಾನದ ಆದಿ ಭಾಗದಲ್ಲಿ ಫೆಮಿನ ಮಧ್ಯಭಾಗದಲ್ಲಿ ಫ್ಯಾಮಿನಿಸ್ಟ್ ಮತ್ತು ಕೊನೆಯ ಭಾಗದಲ್ಲಿ ಫೆಮಿನೈನ್ ಎಂಬ ಸಂಸ್ಕೃತಿ ಪಾಶ್ಚಾತ್ಯ ಜಗತ್ತಿನಲ್ಲಿ ಕಾಣಬರುತ್ತಿತ್ತು.

ಅಂತಹ ಫೆಮಿನ ಫೆಮಿನೈನ್ ಮತ್ತು ಫೆಮಿನಿಸ್ಟ್ ಎಂಬ ಮಹಿಳಾ ಪರ ಚಿಂತನೆಗಳು ನಮ್ಮ ದೇಶದಲ್ಲಿ 12ನೇ ಶತಮಾನದಲ್ಲಿಯೇ ನಾವು ವಚನಕಾರ್ತಿಯರಲ್ಲಿ ಕಂಡಿದ್ದೆವು ಎಂದರೆ ನಮ್ಮ ಕನ್ನಡ ಸಾಹಿತ್ಯದ ಅಗಾಧತೆಯನ್ನು ಅಥ–ರ್ಮಾಡಿಕೊಳ್ಳಬಹುದು.

ಸಾಹಿತ್ಯದ ಸಾಗರಕ್ಕೆ ಸೇರುವ ನದಿಗಳು ಸಾವಿರಾರು. ಅಂತಹ ಸಾವಿರಾರು ನದಿಗಳಲ್ಲಿ ಹಲವರನ್ನು ನೆನಪಿಸಿಕೊಳ್ಳುವ ಗುರುತಿಸುವ ಅವರ ಕುರಿತು ಮಾಹಿತಿ ನೀಡುವ ಈ ಕಾರ್ಯದಲ್ಲಿ ಕೆಲವರ ಹೆಸರುಗಳು ಬಿಟ್ಟು ಹೋಗಿರಬಹುದು. ಆದರೆ ಉದ್ದೇಶಪೂರ್ವಕವಾಗಿ ಅಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತೇನೆ. ನೂರಾರು ಆಟಿಕೆಗಳ ಮಧ್ಯದಲ್ಲಿ ಯಾವುದನ್ನು ಆಯ್ಕೆ ಮಾಡಬೇಕು ಎಂದು ಪುಟ್ಟ ಮಗುವಿನಲ್ಲಿ ಉಂಟಾಗುವ ಗೊಂದಲ ನನ್ನಲ್ಲೂ ಉಂಟಾಗಿದ್ದು ದಿಕ್ಕು ತಿಳಿಯದಂತಾಗಿತ್ತು. ಅಂತೆಯೇ ಆಯ್ದ ಕೆಲವು ಮಹಿಳಾ ಲೇಖಕರ ಕೊಡುಗೆಗಳನ್ನು ಇಲ್ಲಿ ಸ್ಮರಿಸಿದ್ದೇನೆ.

ಜಾನಪದ ಸಂಭ್ರಮ । ಕಜಾಪ ವಡವಡಗಿ ವಲಯ ಘಟಕ ಉದ್ಘಾಟನೆ । ಗೋನಾಳ ಅಭಿಮತ

# ಜಾನಪದ ಕಲಾವಿದರು ಸಾಂಸ್ಕೃತಿಕ ರಾಯಭಾರಿಗಳು



**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ಜಾನಪದ ಸಂಸ್ಕೃತಿಯು ಆಚಾರ-ವಿಚಾರ, ನೀತಿ-ನಿಯಮ, ನಂಬಿಕೆ - ಸಂಪ್ರದಾಯ, ಮಾತು -ಹರಟೆ, ಮತ್ತು ಆಚರಣೆಗಳ ಮೂಲಕ ಮೌಖಿಕ ಪರಂಪರೆಯ ಮೂಲಕ ಜನರ ಒಳಿತಿಗಾಗಿ ಉಳಿದುಕೊಂಡಿವೆ. ಸಾರ್ವತ್ರಿಕ ಮೌಲ್ಯಗಳನ್ನು ಪ್ರತಿಪಾದಿಸುತ್ತ ಇಡಿ ಜಗತ್ತಿಗೆ ಮಾದರಿಯಾಗಿವೆ ಎಂದು ಕನ್ನಡ ಜಾನಪದ ಪರಿಷತ್ ಮುದ್ದೇಬಿಹಾಳ ತಾಲೂಕಾಧ್ಯಕ್ಷ ಎ ಆರ್ ಮುಲ್ಲಾ ಹೇಳಿದರು.

ಬಸವನಬಾಗೇವಾಡಿ ತಾಲೂಕಿನ ಜಾಯವಾಡಗಿಯಲ್ಲಿ ಕನ್ನಡ ಜಾನಪದ ಪರಿಷತ್ ಜಿಲ್ಲಾ ಘಟಕ ವಿಜಯಪುರ ಮತ್ತು ತಾಲೂಕು ಘಟಕ ಬಸವನಬಾಗೇವಾಡಿ ಹಾಗೂ ಸೋಮನಾಥ ವ ಶಿವಪ್ಪ ಮುತ್ಯಾನ ಜಾತ್ರಾ ಸಮಿತಿ ಸಹಯೋಗದಲ್ಲಿ "ಜಾನಪದ ಸಂಭ್ರಮ" ಹಾಗೂ " ಕ ಜಾ ಪ ವಡವಡಗಿ ವಲಯ ಘಟಕ" ಉದ್ಘಾಟಿಸಿ ಮಾತನಾಡಿದ ಅವರು ರಾಜ್ಯದಲ್ಲಿ ಡಾ ಎಸ್ ಬಾಲಾಜಿ ಮತ್ತು ಜಿಲ್ಲೆಯಲ್ಲಿ ಬಾಳನಗೌಡ ಪಾಟೀಲರ ನೇತೃತ್ವದಲ್ಲಿ ಜಾನಪದ ಸಂಸ್ಕೃತಿ ಉಳಿಸಿ ಬೆಳೆಸುವ ಕಾರ್ಯ ಭರದಿಂದ ಸಾಗುತ್ತಿದೆ. ಸಂಘ ಸಂಸ್ಥೆಗಳು ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಬಸವನಬಾಗೇವಾಡಿ ತಾಲೂಕು ಕ ಜಾ ಪ ಅಧ್ಯಕ್ಷ ದೇವೇಂದ್ರ ಗೋನಾಳ, ಜಾನಪದ ಕಲಾವಿದರು ಈ ದೇಶದ ಸನಾತನ ಸಂಸ್ಕೃತಿಯನ್ನು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಸಾಗಿಸುತ್ತಾ, ಸಾಂಸ್ಕೃತಿಕ ರಾಯಭಾರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕಲಾವಿದ-ರಿಗೆ ಸರಕಾರ ಸಹಾಯ,ಸವಲತ್ತು ಮತ್ತು ಗೌರವ ನೀಡಬೇಕೆಂದು ಹೇಳಿದರು.

ನಿಡಗುಂದಿ ತಾಲೂಕು ಕ ಜಾ ಪ ಅಧ್ಯಕ್ಷ ವೈ ಎಸ್ ಗಂಗಶೆಟ್ಟಿ ವಲಯ ಘಟಕದ ನೂತನ ಪದಾಧಿಕಾ-ರಿಗಳಿಗೆ ಪದಪತ್ರ ನೀಡಿ ಜಾನಪದ ಸಂಸ್ಕೃತಿ ಜೀವಂತವಾಗಿಡಲು ಹಳ್ಳಿಗಳು ಕಾರಣಿಭೂತವಾಗಿವೆ. ಅದಕ್ಕಾಗಿ ಕ ಜಾ ಪ ವಲಯ ಘಟಕ ಸ್ಥಾಪನೆ ಮಾಡುತ್ತಿದ್ದೇವೆ. ಈ ಮೂಲಕ ಜಾನಪದ ಉಳಿಸಿ ಬೆಳೆಸಲು ಸಹಕಾರಿಯಾಗುತ್ತಿದೆ ಎಂದರು.

ಕನ್ನಡ ಜಾನಪದ ಪರಿಷತ್ ಜಿಲ್ಲಾ ಸಂಚಾಲಕ ಪ್ರೊ ಗುರುರಾಜ ಹಳ್ಳೂರ ಪ್ರಾಸ್ತಾವಿಕವಾಗಿ ಮಾತನಾಡಿ ಪರಿಷತ್ತಿನ ಕಾರ್ಯ ಚಟುವಟಿಕೆ ತಿಳಿಸಿದರು. ಹಿರೇಮುರಾಳ ವಲಯ ಅಧ್ಯಕ್ಷ ಗಿರೀಶಗೌಡ ಪಾಟೀಲ ಮತ್ತು ಜಾನಪದ ಚಿಂತಕ ಕಾಶಿನಾಥ ಅಗಸಬಾಳ ಮಾತನಾಡಿದರು.

ವೇದಿಕೆಯಲ್ಲಿ ಜಾತ್ರಾ ಸಮಿತಿಯ ಬಸನಗೌಡ ಪಾಟೀಲ, ಶರಣಗೌಡ ನರಸಲಗಿ, ಪರಸಪ್ಪ ಪೂಜಾರಿ,ಶರಣಗೌಡ ಪಾಟೀಲ, ಮುದಕನಗೌಡ ಕಾಶಿನಕುಂಟಿ ಮತ್ತಿತರರು ಉಪಸ್ಥಿತರಿದ್ದರು. ವಲಯ ಘಟಕದ ನೂತನ ಪದಾಧಿಕಾರಿಗಳಿಗೆ ಸನ್ಮಾನಿಸಿ ಪರಿಷತ್ತಿನ ಪದಪತ್ರ ನೀಡಲಾಯಿತು.

ವಲಯ ಘಟಕದ ನೂತನ ಅಧ್ಯಕ್ಷ ಮಹಾಂತಗೌಡ ಗೌಡರ ಸ್ವಾಗತಿಸಿದರು.ಪ್ರಭುಸ್ವಾಮಿ ಹಿರೇಮಠ ನಿರೂಪಿಸಿ ವಂದಿಸಿದರು.

ಕಾರ್ಯಕ್ರಮದಲ್ಲಿ ಭಜನಾಪದ, ಡೊಳ್ಳಿನಪದ, ಸಂಪ್ರದಾಯ ಪದ, ಗೀಗೀಪದ ಪ್ರದರ್ಶನ ನಡೆಯಿತು.

# ಮಹಾತ್ಮಾ ಜ್ಯೋತಿಬಾ ಫುಲೆ ಜಯಂತಿ ಆಚರಣೆ



**ಉದಯರಶ್ಮಿ ನ್ಯೂಸ್**

ವಿಜಯಪುರ: ಸುಮಾರು 100 ವರ್ಷಗಳ ಹಿಂದಿನ ಸಮಾಜದಲ್ಲಿ ಜಾತಿ ವ್ಯವಸ್ಥೆ ಬೇರು ಬಿಟ್ಟು ಸಮಾಜದಲ್ಲಿ ಒಂದು ಬಹುದೊಡ್ಡ ಕಂದಕವನ್ನೆ ನಿರ್ಮಿಸಿ ಶಿಕ್ಷಣ ಎನ್ನುವುದು ಕೆಲವರಿಗೆ ಮಾತ್ರ ಸಿಮಿತವಾಗಿರುವ ಕಾಲಘಟ್ಟದಲ್ಲಿ ದಲಿತ, ಶೋಷಿತ, ನಿರ್ಗತಿಕ, ಹಿಂದುಳಿದ ಪುರುಷ ಹಾಗೂ ಮಹಿಳೆಯರ ಶಿಕ್ಷಣಕ್ಕಾಗಿ ಸಮಾಜದಲ್ಲಿರುವ ತಾರತಮ್ಯಗಳನ್ನು ಎದುರಿಸಿ ಅನೇಕ ರೀತಿಯ ಸವಾಲುಗಳ ಮಧ್ಯ ಅಕ್ಷರ ಬೀಜ ಬಿತ್ತುವುದರೊಂದಿಗೆ ಬಹುದೊಡ್ಡ ಹೋರಾಟ ಮಾಡಿದ ಮಹಾನ ಮಹಾತ್ಮ ಜ್ಯೋತಿಬಾ ಫುಲೆ ಎಂದು ದಲಿತ ವಿದ್ಯಾರ್ಥಿ ಪರಿಷತ್ತಿನ ಮುಖಂಡ ಪ್ರಜ್ವಲ ಅಫಜಲಪುರ ಹೇಳಿದರು.

ಜಿಲ್ಲೆಯ ದಲಿತ ವಿದ್ಯಾರ್ಥಿ ಪರಿಷತ್ ಜಿಲ್ಲಾ ಕೇಂದ್ರ ಕಚೇರಿಯಲ್ಲಿ ಮಹಾತ್ಮಾ ಜ್ಯೋತಿಬಾ ಫುಲೆ ಅವರ ಜಯಂತ್ಯುತ್ಸವನ್ನು ಭಾವಚಿತ್ರಕ್ಕೆ ಪೂಜೆ ಸಲ್ಲಿಸುವುದರೊಂದಿಗೆ ಆಚರಿಸಲಾಯಿತು.

ತನ್ನ ಧರ್ಮಪತ್ನಿಯಾದ ಅಕ್ಷರದವ್ವ ಮಾತೆ ಸಾವಿತ್ರಿಬಾಯಿ ಫುಲೆ ಅವರೊಂದಿಗೆ ಜೊತೆಗೂಡಿ ಶಿಕ್ಷಣದಲ್ಲಿ ಬಹುದೊಡ್ಡ ಕ್ರಾಂತಿ ಮಾಡಿ ನೆರೆಯ ಮಹಾರಾಷ್ಟ್ರದಲ್ಲಿ ಪ್ರಾರಂಭವಾದ ಈ ಶಿಕ್ಷಣ ಕ್ರಾಂತಿ ದೇಶದ ಎಲ್ಲಕಡೆಗೂ ಪಸರಿಸಿ ಈ ನಾಡಿನಲ್ಲಿ ಎಲ್ಲರನ್ನು ಶಿಕ್ಷಣವಂತರಾಗಲು ಈ ದಂಪತಿಗಳ ಪಾತ್ರ ಎಂದಿಗೂ ಅಜರಾಮರವಾಗಿದೆ, ಆದ್ದರಿಂದ ಪ್ರತಿದಿನ ಇಂತಹ ಮಹಾನ ಸಾಧಕರ ಸಾಧನೆಯನ್ನು ನಮ್ಮ ಮುಂದಿನ ಪೀಳಿಗೆಗೆ ತಿಳಿಸುವ ಕೆಲಸ ನಾವೆಲ್ಲರೂ ಮಾಡಬೇಕಿದೆ ಎಂದರು

ಈ ವೇಳೆ ಸಂತೋಷ ಪೂಜಾರಿ, ರಮೇಶ ಚಲವಾದಿ, ಮಹಾಂತೇಶ ಚಲವಾದಿ ಸೇರಿದಂತೆ ಅನೇಕರು ಇದ್ದರು.

# ಭೀಮಾತೀರದ ವಲಯದಲ್ಲಿ ಸಾಧನೆಗೈದ ಬಾಲಕಿಯರು




**ಉದಯರಶ್ಮಿ ನ್ಯೂಸ್**

ವಿಜಯಪುರ: ಜಿಲ್ಲೆಯ ಇಂಡಿ ತಾಲೂಕಿನ ಚಿಕ್ಕ ಗ್ರಾಮ ಚವಡಿಹಾಳ ಗ್ರಾಮದಲ್ಲಿರುವ ಶ್ರೀ ಭಾಗ್ಯವಂತಿ ವಿದ್ಯಾವರ್ಧಕ ಸಂಘದ ಶ್ರೀ ಭಾಗ್ಯವಂತಿ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಪದವಿ ಪೂರ್ವ ಕಾಲೇಜಿನ ವ್ಯಾಸಂಗಮಾಡಿದ ಬಡವ

ಮತ್ತು ರೈತರ ಮಕ್ಕಳಾದ ಬಾಲಕಿಯರು ಕಲಾ, ವಿಜ್ಞಾನ & ವಾಣಿಜ್ಯ ವಿಭಾಗದಲ್ಲಿ 99%, 98%, ಮತ್ತು 96% ಅಂಕಗಳನ್ನು ಪಡೆದು ತಾಲೂಕಾ ಮಟ್ಟದಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಜಿಲ್ಲೆಯ ಶೈಕ್ಷಣಿಕ

ಸಾಧನೆಗೆ ಗರಿ ಮೂಡಿಸಿದ್ದಾರೆ.

ಇಂಡಿ ತಾಲೂಕಿನ ಗಡಿಭಾಗದಹಳ್ಳಿ ಚವಡಿಹಾಳ ಒಂದ

ಚಿಕ್ಕ ಗ್ರಾಮ. ರೈತರು, ಬಡವರ ಮಧ್ಯಮ ವರ್ಗದ

ಮತ್ತು ಹಿಂದುಳಿದ ಶ್ರಮಜೀವಿಗಳು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿರುವ ಜನಸಮುದಾಯದ ಈ ಹಳ್ಳಿಯಲ್ಲಿ

ಹಿಂದುಳಿದ ವರ್ಗದ ಆಡಳಿತದಲ್ಲಿ ನಡೆಯುತ್ತಿರುವ ಶಿಕ್ಷಣ ಸಂಸ್ಥೆ ಶ್ರೀ ಭಾಗ್ಯವಂತಿ ವಿದ್ಯಾವರ್ಧಕ ಸಂಘ. ಇದು ಅಪ್ಪಟ ಗ್ರಾಮಿಣ ಪ್ರದೇಶವಾಗಿದ್ದು ಭಿಮಾತೀರದ ಸೆರಗಿನಲ್ಲಿದ್ದ ಈ ಗ್ರಾಮದ ಶಾಂತಪ್ಪ. ಪಂಚಪ್ಪ ದಶವಂತ ಎಂಬುವರು

ಈ ಭಾಗದ ಬಡಮಕ್ಕಳಿಗೆ ಶಿಕ್ಷಣ ದೊರೆತರೆ, ಬಡವ ಬದುಕು ಹಸನಾಗುವುದೆಂಬ

ಯೋಚನೆಯಿಂದ 1991ರಲ್ಲಿ

ಪ್ರಾಥಮಿಕ ಶಾಲೆಯಿಂದ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ, 2021ರಲ್ಲಿ ಪದವಿ ಪೂರ್ವ ಶಿಕ್ಷಣವನ್ನು ಪ್ರಾರಂಭಿಸಿದ ಮೊದಲ ಹಂತದಲ್ಲಿಯೇ ಈ ಕಾಲೇಜಿನ ವಿದ್ಯಾರ್ಥಿನಿಯರು ಕಲಾ, ವಿಜ್ಞಾನ ಮತ್ತು ವಾಣಿಜ್ಯ

ವಿಭಾಗದಲ್ಲಿ ಜಿಲ್ಲೆಯ ಶೈಕ್ಷಣಿಕ ಕ್ಷೇತ್ರಕ್ಕೆ ಗ್ರಾಮಿಣ ಭಾಗದ ದೊಡ್ಡ ಸಾಧನೆಯ ಕೊಡುಗೆಯನ್ನು

ನೀಡಿದ್ದಾರೆ.

ಕಾಲೇಜು ಪ್ರಾರಂಭವಾದ ಮೊದಲ ವರ್ಷದಲ್ಲಿಯೇ ಕಲಾ ವಿಭಾಗದ ವಿದ್ಯಾರ್ಥಿನಿ ಗೌರಮ್ಮ ಕುಂಬಾರ 99%(587) ಅಂಕಗಳನ್ನು,

ವಿಜ್ಞಾನ ವಿಭಾಗದಲ್ಲಿ ಕುಮಾರಿ ವಿದ್ಯಾಶ್ರೀ ಗಣಾಚಾರಿ 98%(587) ಅಂಕಗಳನ್ನು

ಮತ್ತು ವಾಣಿಜ್ಯ ವಿಭಾಗದಲ್ಲಿ ಕುಮಾರಿ ವಿದ್ಯಾವತಿ ಬಿರಾದಾರ 96%(574) ಅಂಕಗಳನ್ನು ಪಡೆದು ಪ್ರಥಮ ಸ್ಥಾನ ಪಡೆಯುವದರೊಂದಿಗೆ ವಿಜ್ಞಾನ ವಿಭಾಗದಲ್ಲಿ 58 ಡಿಸ್ಟಿಂಕಷನ್, 04 ಪ್ರಥಮಶ್ರೇಣಿ, ಕಲಾ ವಿಭಾಗದಲ್ಲಿ 16 ಡಿಸ್ಟಿಂಕಷನ್ ಮತ್ತು 5 ಪ್ರಥಮಶ್ರೇಣಿ ಮತ್ತು ವಾಣಿಜ್ಯ ವಿಭಾಗದಲ್ಲಿ 8 ಡಿಸ್ಟಿಂಕಷನ್ ಮತ್ತು 04 ಪ್ರಥ-ಮಶ್ರೇಣಿಯ

ಫಲಿತಾಂಶವನ್ನು ನೀಡಿ ಕಾಲೇಜಿನ ಒಟ್ಟು ಫಲಿತಾಂಶವನ್ನು

100ಕ್ಕೆ 100ರಷ್ಟು ದಾಖಲಿಸಿದ್ದು ಇದು ವಿಜಯಪುರ ಗ್ರಾಮಿಣ ಮಟ್ಟದ ಶ್ರೇಷ್ಠ ಸಾಧನೆಯಾಗಿದೆ. ವಿದ್ಯಾರ್ಥಿನಿಯರ ಈ ಸಾಧನೆಗೆ ಶಿಕ್ಷಣ ಇಲಾಖೆ ಮತ್ತು ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು, ಶಿಕ್ಷಕರು ಹಾಗೂ ಗ್ರಾಮದ ಗುರು-ಹಿರಿಯರು ಈ ಮಕ್ಕಳ ಸಾದನೆಗೆ ಅವರನ್ನು ಸತ್ಕರಿಸಿ ಗೌರವ ಸಲ್ಲಿಸಿದ್ದಾರೆ.

# ತೊರವಿ ಭಾಗಕ್ಕೂ ಬಹು ಬೇಗ ನೀರು: ಎಂ.ಬಿ.ಪಾಟೀಲ



**ಉದಯರಶ್ಮಿ ನ್ಯೂಸ್**

ವಿಜಯಪುರ: ತೊರವಿ ಭಾಗಕ್ಕೂ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜನೆ ರೂಪಿಸಲಾಗಿದ್ದು, ತವರೂರಿನ ಋಣ ತೀರಿಸುವುದಾಗಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಹೇಳಿದ್ದಾರೆ.

ತೊರವಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪ್ರೊ.ರಾಜು ಆಲಗೂರ ಪರ ಬುಧವಾರ ರಾತ್ರಿ ಪ್ರಚಾರ ಕೈಗೊಂಡು ಅವರು ಮಾತನಾಡಿದರು.

ರಾಜ್ಯ ಸರಕಾರ ಪ್ರತಿಯೊಬ್ಬರ ಮನೆಗಳಿಗೆ ಗ್ಯಾರಂಟಿ ಯೋಜನೆಗಳನ್ನು ತಲುಪಿಸಿದೆ. ಆದರೆ, ಕೇಂದ್ರ ಸರಕಾರ ಜನರ ಜೀವನವನ್ನು ಬೆಲೆ ಏರಿಕೆಯಿಂದ ದುರ್ಭರಗೊಳಿಸಿದೆ. ಪೆಟ್ರೋಲ್, ಅಡುಗೆ ಅನಿಲ ಬೆಲೆ ಹೆಚ್ಚಳವಾದಾಗ ಗದ್ದಲ ಉಂಟು ಮಾಡುತ್ತಿದ್ದ ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರಂಥ-ವರು ಈಗ ಮೌನ ವಹಿಸಿದ್ದಾರೆ. ಚುನಾವಣೆ ಬಾಂಡ್ ಇವರ ನಿಜವಾದ ಮುಖವಾಡವನ್ನು ಬಯಲು ಮಾಡಿದೆ ಎಂದು ಅವರು ಹೇಳಿದರು.

ನಾವು ಕೊಟ್ಟ ಭರವಸೆ ಈಡೇರಿಸಿ ಮತ ಕೇಳಲು ಬಂದಿದ್ದೇವೆ. ಸಬ್ ಕಾ ಸಾಥ್ ಎಂದವರು ಈಗ ದೇಶದಲ್ಲಿ ಬಿರುಕು ಮೂಡಿಸುತ್ತಿದ್ದಾರೆ. ಈ ಸಲ ಅವ-ರಿಗೆ ಪ್ರಸ್ತಾಪಿಸಲು ಯಾವುದೇ ವಿಷಯಗಳಿಲ್ಲ. ಯಾವ ಗಾಳಿಯೂ ಇಲ್ಲ. ನಿಮ್ಮೂರಿನ ಮಗನಾದ ಪ್ರೊ. ರಾಜು ಆಲಗೂರ ಅವರಿಗೆ ಮತ ನೀಡಿ ಎಂದು ಮನವಿ ಮಾಡಿದರು.

ತೊರವಿ ಭಾಗಕ್ಕೂ ನೀರು ನೀಡುವ ಯೋಜನೆ ರೂಪಿಸುತ್ತಿದ್ದೇವೆ. ನಮ್ಮೂರಿನ ಋಣ ತೀರಿಸುವೆ. ಆಲಮಟ್ಟಿ ಅಣೆಕಟ್ಟು ಎತ್ತರಿಸಲು ಗೆಜೆಟ್ ನೋಟಿಫಿಕೇಷನ್ ಆದರೆ ಇಡೀ ಜಿಲ್ಲೆ ದೇಶದಲ್ಲಿಯೇ ಶ್ರೀಮಂತವಾಗಲಿದೆ. ಈ ಕೆಲಸ ಜಾರಿಯಾಗಬೇಕಾದರೆ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಬೇಕು ಎಂದು ಸಚಿವ ಎಂ. ಬಿ. ಪಾಟೀಲ ಹೇಳಿದರು.

ಕಾಂಗ್ರೆಸ್ ಅಭ್ಯರ್ಥಿ ಪ್ರೊ. ರಾಜು ಆಲಗೂರ ಮಾತನಾಡಿ, ಪಕ್ಷಾತೀತವಾಗಿ ಗ್ರಾಮದವರು ತಮಗೆ ಬೆಂಬಲಿಸಬೇಕು. ಲೋಕಸಭೆಯಲ್ಲಿ ನಿಮ್ಮ ಭರವಸೆಗೆ ತಕ್ಕಂತೆ ಧ್ವನಿಯಾಗಿ ಕೆಲಸ ಮಾಡುತ್ತೇನೆ. ಕಾಂಗ್ರೆಸ್ಸಿನ ಅಭಿವೃದ್ಧಿ ಕಾರ್ಯಗಳು ನಮ್ಮ ಬೆನ್ನಿಗಿವೆ. ಜಿಲ್ಲೆಯಲ್ಲಿ ಪಕ್ಷದ ಪರ ಅಲೆ ಇದೆ. ಕಳೆದ 25 ವರ್ಷಗಳ ನಂತರ ಈಗ ಬದಲಾವಣೆ ಗಾಳಿ ಬೀಸಿದೆ. ತೊರವಿ ಗ್ರಾಮಸ್ಥರು ಕಾಂಗ್ರೆಸ್ಸಿಗೆ ಸಂಪೂರ್ಣ ಬೆಂಬಲ ನೀಡಿ ಎಂದು ಮನವಿ ಮಾಡಿದರು.

ಮುಖಂಡ ಎಸ್.ಎಸ್. ಬಿರಾದಾರ ಪ್ರಾಸ್ತಾವಿಕ ಮಾತನಾಡಿ, ತೊರವಿ ಗ್ರಾಮಕ್ಕೆ ರಾಜಕೀಯ ಇತಿಹಾಸವಿದೆ. ಬಿ. ಎಂ. ಪಾಟೀಲ ಅವರಿಂದ ಹಿಡಿದು, ಎಂ. ಬಿ. ಪಾಟೀಲ ಅವರ ವರೆಗೆ ರಾಜ-ಕಾರಣದ ಹಲವು ಮೈಲಿಗಲ್ಲು ದಾಖಲಾಗಿವೆ. ಈ ಬಾರಿ ಲೋಕಸಭೆ ಅಭ್ಯರ್ಥಿಯಾಗಿ ಇದೇ ಗ್ರಾಮದ ಪ್ರೊ. ರಾಜು ಆಲಗೂರ ಅವರು ಸ್ಪರ್ಧಿಸಿರುವುದು ನಮಗೆಲ್ಲ ಹೆಮ್ಮೆಯ ವಿಷಯ. ನಾವೆಲ್ಲರೂ ಒಟ್ಟಾಗಿ ಅವರನ್ನು ಗೆಲ್ಲಿಸಬೇಕಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮುಖಂಡರಾದ ಹಮೀದ್ ಮುಶ್ರೀಫ್, ನರಸಿಂಗ ಮಹಾರಾಜರು, ಭೀಮು ಮಹಾರಾಜರು, ಸುರೇಶಗೌಡ ಪಾಟೀಲ ಉಪಸ್ಥಿತ-ರಿದ್ದರು.

## ಮೋರಟಗಿಯಲ್ಲಿ ಸಂಭ್ರಮದ ರಂಜಾನ್ ಆಚರಣೆ । ಸಾಮೂಹಿಕ ಪ್ರಾರ್ಥನೆ

# ಪರ ಧರ್ಮದ ವ್ಯಕ್ತಿಯನ್ನು ಪ್ರೀತಿಯಿಂದ ಕಾಣಿರಿ :ಕಣ್ಣಿ



**ಉದಯರಶ್ಮಿ ನ್ಯೂಸ್**

ಮೋರಟಗಿ: ಹುಟ್ಟು ಆಕಸ್ಮಿಕ, ಸಾವು ಅಂತೂ ನಿಶ್ಚಿತ. ಹುಟ್ಟು ಸಾವಿನ ಮದ್ಯದಲ್ಲಿ ದಾನ, ಧರ್ಮ, ಪರೋಪಕಾರ, ಮಾಡಿ ಪರ ಧರ್ಮದ ವ್ಯಕ್ತಿಯನ್ನು ಪ್ರೀತಿಯಿಂದ ಕಂಡು ಜೀವನ ಕಳೆಯಬೇಕು ಎಂದು ಅಂಜುಮನ್ ಸಮೀತಿ ಅಧ್ಯಕ್ಷ ಮುಸ್ಲಿಂ ಸಮುದಾಯದ ಹಿರಿಯ ಮುಖಂಡ ಮೈಬೂಬಸಾಬ ಕಣ್ಣಿ ಅಭಿಪ್ರಾಯ ವ್ಯಕ್ತಪಡಿಸಿದರು.

ರಮಜಾನ್ ಹಬ್ಬದ ಪ್ರಯುಕ್ತ ಗುರುವಾರ ಗ್ರಾಮದ ಇದಗಾ ಮೈದಾನದ ಅವರಣದಲ್ಲಿ ಹಮ್ಮಿಕೊಂಡ ಸಾಮೂಹಿಕ ಪ್ರಾಥ-ರ್ನೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಬಲಗೈಯಿಂದ ಕೊಟ್ಟ ದಾನ ಎಡಗೈಗೆ ಗೊತ್ತಾಗಬಾರದು ಅದು ಶ್ರೇಷ್ಠ ದಾನ, ಅನಾಥರು, ಅಂಗವಿಕಲರು, ನಿರ್ಗತಿಕರು ವೃದ್ಧರು ಕಂಡಲ್ಲಿ ಕೈಲಾದಷ್ಟು ಸಹಾಯ ಮಾಡಿ, ಇನ್ನೊಬ್ಬರಿಗೆ ಅನ್ಯ ಬಗೆಯಬೇಡಿ, ಇರುವಷ್ಟು ದಿನ ಶಾಂತಿ ಸಹಬಾಳ್ವೆಯಿಂದ ಜೀವನ ಕಳೆಯಬೇಕು. ಪರಮಾತ್ಮ ದೇಶದ ಎಲ್ಲ ಸಮುದಾಯದ ಬಾಂಧವರಿಗೆ ಅರೋಗ್ಯ ಕರುಣಿಸಲಿ ನಮ್ಮ ದೇಶಕ್ಕೆ ಸಮಯಕ್ಕೆ ಸರಿಯಾಗಿ ಮಳೆ ಬೆಳೆ ಆಗಲಿ ಎಂದು ಹಾರೈಸಿದರು.

ನಂತರ ಸಾಮೂಹಿಕ ಪ್ರಾರ್ಥನೆ ಜರುಗಿತು. ಮೈಲಾನ ಮಂತ್ರವನ್ನು ಪಟಿಸಿದರು, ನಮಾಜ ನಂತರ ಬಡವರಿಗೆ ಕಿಟ್ ಬಟ್ಟೆ ವಿತರಿಸಿ ಮುಸ್ಲಿಂ ಸಮುದಾಯದ ಎಲ್ಲ ಬಾಂದವರು ಗ್ರಾಮದ ಪ್ರಮುಖ ರಸ್ತೆಯ ಮೂಲಕ ಸಂಚರಿಸಿ ಪರಧರ್ಮದ ಹಿರಿಯರಿಗೆ ಯುವಕರಿಗೆ ಅಪ್ಪುಗೆ ಮಾಡಿ ಮನೆ ಮನೆಗೆ ಕರೆಸಿ ಸುರಕುಂ ಕುಡಿಸಿ ಸಂಭ್ರಮಿಸಿ ರಮಜಾನ್ ಹಬ್ಬವನ್ನು ಅರ್ಥಪೂರ್ಣವಾಗಿ ವಿಜೃಂಭಣೆಯಿಂದ ಆಚರಿಸಿದರು.

ಪ್ರಾರ್ಥನಾ ಸಮಾರಂಭದಲ್ಲಿ ಅಬ್ಬಾಸಲಿ ಬಳೂರಗಿ, ಮೈಬುಬ ಕಕ್ಕಳಮೆಲಿ, ಸೈಯದಸಾಬ ಗೊರಗುಂಡಗಿ, ಸಲೀಮ್ ಕಣ್ಣಿ, ಹಸನಸಾಬ ಶಿರಷ್ಯಾಡ್, ಎಂ ಕೆ ಮುಲ್ಲಾ, ರಜಾಕ್ ಬಾಗವಾನ, ಅಬ್ಬಾಸಲಿ ಬಂಟನೂರ, ಸೇರಿದಂತೆ ಅನೇಕರು ಇದ್ದರು.

# ಜಾಯವಾಡಗಿ ಜಾತ್ರೆಯಲ್ಲಿ ಗಮನ ಸೆಳೆದ ಜಾನುವಾರು ಜಾತ್ರೆ



**ಉದಯರಶ್ಮಿ ನ್ಯೂಸ್**

– ಬಸವರಾಜ ನಂದಿಹಾಳ

ಬಸವನಬಾಗೇವಾಡಿ: ತಾಲೂಕಿನ ಸುಕ್ಷೇತ್ರ ಜಾಯವಾಡಗಿ ಗ್ರಾಮದ ಆರಾಧ್ಯದೈವ ಸೋಮನಾಥೇಶ್ವರ, ಶಿವಪ್ಪಮುತ್ಯಾನ ಜಾತ್ರೆಯಂಗವಾಗಿ ನಡೆಯುವ ಜಾನುವಾರುಗಳ ಜಾತ್ರೆಯಲ್ಲಿ ವಿವಿಧೆಡೆಯಿಂದ ಅಪಾರ ಸಂಖ್ಯೆಯ ಜಾನುವಾರುಗಳು ಗುರುವಾರ ಜಾತ್ರೆಯಲ್ಲಿ ಕಂಡುಬಂದವು. ಬರಗಾಲದಲ್ಲಿಯೂ ಜಾನುವಾರುಗಳ ಜಾತ್ರೆಯಲ್ಲಿ ಜಾನುವಾರುಗಳನ್ನು ಖರೀದಿಸಲು, ಮಾರಾಟ ಮಾಡಲು ಅಪಾರ ಸಂಖ್ಯೆಯಲ್ಲಿ ಜನರು ಬಂದಿದ್ದು ಕಂಡುಬಂದಿತ್ತು.

ಈ ಸಲದ ಜಾನುವಾರುಗಳ ಜಾತ್ರೆಯಲ್ಲಿ ಎತ್ತುಗಳು ರೂ.1.50 ರಿಂದ 2 ಲಕ್ಷ ಅಧಿಕದವರೆಗೂ ಮಾರಾಟವಾದವು. ಜಾನುವಾರುಗಳಿಗೆ ಬೇಕಾದ ಸಾಮಗ್ರಿಗಳು ಸಹ ಮಾರಾಟಕ್ಕೆ ಬಂದಿದ್ದವು. ರೈತ ಬಾಂಧವರು ತಮಗೆ ಬೇಕಾದ ಜಾನುವಾರುಗಳನ್ನು ಖರೀದಿ ಮಾಡುವ ಜೊತೆಗೆ ಜಾನುವಾರುಗಳಿಗೆ ಬೇಕಾದ ಹಗ್ಗ, ಗೆಜ್ಜೆ ಸರ, ಹಣೆಕಟ್ಟು ಸೇರಿದಂತೆ ಅಗತ್ಯ ಸಾಮಗ್ರಿಗಳನ್ನು ಖರೀದಿಸುವಲ್ಲಿ ನಿರತರಾಗಿದ್ದರು.

ಬುಧವಾರದಿಂದ ಆರಂಭವಾಗಿರುವ ಜಾನುವಾರುಗಳ ಜಾತ್ರೆಗೆ ಜಿಲ್ಲೆ ಸೇರಿದಂತೆ ಶಹಾಪೂರ, ಯಾದಗಿರಿ, ಬಾಗಲಕೋಟ, ರಾಯಚೂರ ವಿವಿಧ ಜಿಲ್ಲೆಯ ರೈತ ಬಾಂಧವರು ಮಾರಾಟ ಮಾಡುವ ಉದ್ದೇಶದಿಂದ ಅವುಗಳಿಗೆ ಅಗತ್ಯವಿರುವ ಮೇವಿನೊಂದಿಗೆ ಬಂದು ಬಿಡು ಬಿಟ್ಟಿದ್ದಾರೆ. ಬಿರು ಬಿಸಿಲಿನಿಂದಾಗಿ ಬಸವಳಿಯುತ್ತಿರುವ ಎತ್ತುಗಳಿಗೆ ಕೆಲ ರೈತರು ನೆರಳು ಮಾಡಿರುವುದು ಕಂಡುಬಂದಿತ್ತು.

ರೂಡಗಿ ರೈತರೊಬ್ಬರು ಎರಡು ಹಲ್ಲಿನ ಹೋ-ರಿಗೆ ರೂ. 25 ಸಾವಿರ ನೀಡಿ ಖರೀದಿಸಿರುವುದಾಗಿ ಹೇಳಿದರು. ತಮದಡ್ಡಿಯ ಬಸವರಾಜ ಘತ್ತರಗಿ ಅವರನ್ನು ಮಾತನಾಡಿಸಿದಾಗ ನಮ್ಮ ಎತ್ತುಗಳನ್ನು ರೂ.1 ಲಕ್ಷಕ್ಕೆ ಕೇಳುತ್ತಿದ್ದಾರೆ. ನಾನು ರೂ. 1.20 ಲಕ್ಷ ಬಂದರೆ ಮಾರಾಟ ಮಾಡುವೆ. ನನ್ನ ಹೋರಿಯನ್ನು ರೂ. 20 ಸಾವಿರ ಮೇಲೆ ಬಂದರೆ ಮಾತ್ರ ಮಾರಾಟ ಮಾಡುವುದಾಗಿ ಹೇಳಿದರು.

ಕಾನ್ನಾಳದ ಗುರು ಸಜ್ಜನ ಅವರು ಈ ಜಾನುವಾರು ಜಾತ್ರೆಯು ಈ ಭಾಗದಲ್ಲಿಯೇ ದೊಡ್ಡ ಜಾನುವಾರು ಜಾತ್ರೆಯಾಗಿದೆ. ಈ ಸಲ ಆಕಳುಗಳಿಗೆ ಬಹಳ ಬೇಡಿಕೆ ಕಂಡು ಬರುತ್ತಿದೆ. ನಾನು ರೂ. 31 ಸಾವಿರ ಕೊಟ್ಟು ಒಂದು ಆಕಳು ಖರೀದಿಸಿದ್ದೇನೆ. ಬಹಳ ಜನರು ಆಕಳು ಕೇಳಿದರೂ ಸಿಗುತ್ತಿಲ್ಲ. ಕಳೆದ ಸಲಕ್ಕಿಂತಲೂ ಈ ಸಲ ಜಾನುವಾರುಗಳು ಹೆಚ್ಚು ಬಂದಿವೆ. ಅಷ್ಟೇ ಮಾರಾಟವಾಗುತ್ತಿವೆ ಎಂದು ಹೇಳಿದರು.

ಈ ಜಾತ್ರೆಯಲ್ಲಿ ಅಥಣಿ, ಗೋಟೆ,ಬೆನಕದಿನ್ನಿಯಿಂದ ಎತ್ತಿನ ಗಾಡಿಗಳು ಮಾರಾಟಕ್ಕೆ ಬಂದಿವೆ. ಎರಢೂವರೆ ಪೂಟ್ನಿಂದ ಹಿಡಿದು ಆರು ಪೂಟ್ದವರೆಗೂ ಇರುವ ಎತ್ತಿನ ಗಾಡಿಗಳು ಕಂಡುಬಂದವು. ರೈತರು ಚೌಕಾಸಿ ಮಾಡಿ ಎತ್ತಿನ ಗಾಡಿಗಳನ್ನು ಖರೀದಿಸುವಲ್ಲಿ ನಿರತರಾಗಿದ್ದರು.

ಎತ್ತಿನ ಗಾಡಿ ಮಾರಾಟಗಾರ ಅಥಣಿಯ ರಾಜು ಬಡಿಗೇರ ಅವರನ್ನು ಮಾತನಾಡಿಸಿದಾಗ ನಾನು ಎರಢೂವರೆ ಪೂಟ್ದಿಂದ ಹಿಡಿದು ನಾಲ್ಕು ಪೂಟ್ದವರೆಗೂ ಇರುವ ಎತ್ತಿನ ಗಾಡಿಗಳನ್ನು ಮಾರಾಟಕ್ಕೆ ತಂದಿದ್ದೇನೆ. ನಿನ್ನೆ 5-6 ಮಾರಾಟವಾಗಿವೆ. ನಾಳೆ ಒಂದು ದಿನ ಇದ್ದು ಎಷ್ಟು ಮಾರಾಟವಾಗುತ್ತವೋ ಅಷ್ಟು ಮಾರಾಟ ಮಾಡುವುದಾಗಿ ಹೇಳಿದರು.

ಜಾತ್ರಾ ಉತ್ಸವ ಸಮಿತಿಯಿಂದ ಜಾನುವಾರುಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವ ಜೊತೆಗೆ ರೈತರು ಇರುವೆಡೆ ಟ್ಯಾಂಕರ್ ಮೂಲಕ ನೀರು ಪೂರೈಕೆ ವ್ಯವಸ್ಥೆ ಮಾಡುತ್ತಿರುವುದು ಕಂಡುಬಂದಿತ್ತು. ರೈತರು ಜಾನುವಾರುಗಳ ಮಾರಾಟ, ಖರೀದಿಸಿದ ನಂತರ ಜಾತ್ರಾ ಉತ್ಸವ ಸಮಿತಿಯಲ್ಲಿ ತಾವು ತೆಗೆದುಕೊಂಡು ಜಾನುವಾರು ವಿವರ, ಜಾನುವಾರುಗಳ ಖರೀದಿಸಿದ ಬೆಲೆ ಮಾಹಿತಿ ನೀಡಿ ರೂ.50 ನೀಡಿ ರಸೀದಿ ಮಾಡಿಸಿಕೊಂಡು ಹೋಗುತ್ತಿರುವುದು ಕಂಡುಬಂದಿತ್ತು.

# ಸಡಗರ-ಸಂಭ್ರಮದಿಂದ ರಂಜಾನ್ ಆಚರಣೆ



**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ಪಟ್ಟಣ ಸೇರಿದಂತೆ ತಾಲೂಕಿನಲ್ಲಿ ಗುರುವಾರ ಮುಸ್ಲಿಂ ಬಾಂಧವರು ಈ□□□ಲ್ ಫಿತ್ರ ಹಬ್ಬವನ್ನು (ರಂಜಾನ್) ಸಡಗರ-ಸಂಭ್ರಮದಿಂದ ಆಚ-ರಿಸಿದರು.

ಮಕ್ಕಳು, ಯುವಕರು, ಹಿರಿಯರು ಸೇರಿದಂತೆ ಎಲ್ಲರೂ ಹೊಸ ಬಟ್ಟೆ ತೊಟ್ಟು ಬೆಳಗ್ಗೆ ಪಟ್ಟಣದ ಮಸಬಿನಾಳ ರಸ್ತೆಯಲ್ಲಿರುವ ಈದ್ಗಾ ಮೈದಾನಕ್ಕೆ ತೆರಳಿ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸಿ ಪ್ರಾರ್ಥನೆ ಸಲ್ಲಿಸಿದರು. ನಂತರ ಬಾಂಧವರು ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು.

ಈದ್ಗಾ ಮೈದಾನದಲ್ಲಿ ಜಾಮೀಯಾ ಮಸೀದಿಯ ಹಾಫೀಜ್ ಮಹ್ಮದಅಲಿ ಮಿಲಿ ಅವರು ಸಾಮೂಹಿಕ ಪ್ರಾರ್ಥನೆ ಮಾಡಿಸಿದರು.

ಈ ಸಂದರ್ಭದಲ್ಲಿ ಎಂ.ಡಿ.ಬಳಗಾನೂರ ಮಾತನಾಡಿದರು.

ಸಾಮೂಹಿಕ ಪ್ರಾರ್ಥನೆಯಲ್ಲಿ ಜಾಮೀಯಾ ಮಸೀದಿ ಅಧ್ಯಕ್ಷ ಶಬ್ಬಿರಅಹ್ಮದ ನದಾಫ್, ಕಮಲಸಾಬ ಕೊರಬು,ಅಲ್ತಾಫ್ ಮುದ್ದೇಬಿಹಾಳ, ಎಚ್.ಆರ್.ಬಾಗವಾನ, ಅಬ್ದುಲರಜಾಕ ಬಾಗವಾನ, ಮತಾಬ ಬಮ್ಮನಹಳ್ಳಿ, ಜಾಫರ ಮಕಾನದಾರ, ಚಾಂದಬಾಷಾ ಕೊರಬು, ರಫೀಕ್ ಹೊಕ್ರಾಣಿ, ಅಲ್ಲಾಭಕ್ಷ ಕೊರಬು, ಜಮ್ಮೀಲ್ ಇಬ್ರಾಹಿಂಪೂರ, ಮಹಿಬೂಬ ನಾಯ್ಕೋಡಿ, ಮನ್ನಾನ ಶಾಬಾದಿ, ಎಚ್.ಎಂ.ನದಾಫ,ಬಸೀರ ಮನಗೂಳಿ, ಬಂದೇನವಾಜ ನಂದವಾಡಗಿ, ನಜೀರ ಗಣಿ, ದಸ್ತಗೀರ ವಜ್ಜಲ, ರಮಜಾನ ಹೆಬ್ಬಾಳ, ಸಲೀಂ ಸಯ್ಯದ, ಅಬ್ದುಲರಜಾಕ ಕೊರಬು, ರಫೀಕ ಸಾಠಿ, ಅಬ್ದುಲರಶೀದ ಅವಟಿ, ಮೀರಾಸಾಬ ಕೊರಬು, ನಿಸಾರ ಚೌಧರಿ, ಮಹಿಬೂಬ ಗಣಿ ಸೇ-ರಿದಂತೆ ಇತರರು ಭಾಗವಹಿಸಿದ್ದರು.

# ಕಸಾಪದಿಂದ ಯುಗಾದಿ ಕಾವ್ಯ ಸಂಭ್ರಮ ಇಂದು

**ಉದಯರಶ್ಮಿ ನ್ಯೂಸ್**

ವಿಜಯಪುರ: ನಗರದ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಶುಕ್ರವಾರ ಮುಂಜಾನೆ 11:00 ಗಂಟೆಗೆ ಯುಗಾದಿ ಕಾವ್ಯ ಸಂಭ್ರಮ ಕಾರ್ಯಕ್ರಮ ಜರುಗಲಿದೆ. ಸಾನ್ನಿಧ್ಯವನ್ನು ಕನ್ನೂರ ಗುರುಮಠದ ಸೋಮನಾಥ ಶಿವಾಚಾರ್ಯರು ವಹಿಸಲಿದ್ದಾರೆ. ಉದ್ಘಾಟನೆ ವಿಶ್ರಾಂತ ಡಿಎಸ್‌ಪಿ ಬಸವರಾಜ ಚೌಕಿಮಠ ಮಾಡಲಿದ್ದಾರೆ. ಅಧ್ಯಕ್ಷತೆ ಡಿ ಎಸ್ ಪಿ ವಿಜಯಪುರ ಬಸವರಾಜ ಯಲಗಾರ ವಹಿಸುತ್ತಾರೆ.

ಮುಖ್ಯ ಅತಿಥಿಗಳಾಗಿ ಜ್ಯೋತಿ ಚೌಕಿಮಠ, ಶಿಲ್ಪಾ ಯಲಗಾರ, ಈರಣ್ಣ ಬಿರಾದಾರಗೌಡರ, ಹೊನ್ನಪ್ಪ ಬಿಸನಾಳ, ಇಸಾಕ ಸಾರವಾಡ, ಜಗದೀಶ ಸಾಲಳ್ಳಿ ಆಗಮಿಸಲಿದ್ದಾರೆ.

ಕವನ ವಾಚನ ಮಾಡುವ ಕವಿಗಳು

ಶೋಭಾ ಮೇಡೆಗಾರ, ಮಡಿವಾಳಮ್ಮ ನಾಡಗೌಡ, ಶಿಲ್ಪಾ ಬಸ್ಮೆ, ರೂಪಾ ರಜಪೂತ, ಶೋಭಾ ಹರಿಜನ, ಜಿ ಪಿ ಬಿರಾದಾರ, ಶಿವಾಜಿ ಮೋರೆ, ಶಿಲ್ಪಾ ಹಂಜಿ, ಪಾವ9ತಿ ಸೊನ್ನದ, ಅಣ್ಣುಗೌಡ ಬಿರಾದಾರ, ಕಾಶಿರಾಯ ಹತ್ತಳ್ಳಿ, ಸಾವಿತ್ರಿ ಮೊನಾಜಿ, ಜಗದೀಶ ಬಿರಾದಾರ, ಅನ್ನಪೂರ್ಣ ಚೊಳಕೆ, ರುದ್ರಮ್ಮ ಗಿಡ್ಡಪ್ಪಗೋಳ, ಶಿವಲೀಲಾ ಕೊರವಾರ, ಶಿವಲೀಲಾ ಕೋರಿ, ಶಾಂತಲಾ ಪಾಟೀಲ, ಶ್ರೀಕಾಂತ ಮಾದರ, ಗಿರಿಜಾ ಪಾಟೀಲ, ಭಾರತಿ ಗೊಂಗಡಿ, ವಿದ್ಯಾ ಕಲ್ಯಾಣಶೆಟ್ಟಿ, ಸಿದ್ದನಗೌಡ ಕಾಶಿನಕುಂಟೆ, ಪ್ರತಿಭಾ ತೊರವಿ, ರಜಿಯಾ ದಳವಾಯಿ, ಶಿವತನಯ ಹಿರೇಮಠ, ಸಂಗಮೇಶ ಕೆರೆಪ್ಪಗೋಳ.

ಭೀಮಣ ನಾಯ್ಕರ. ಅಜು9ನ ಹಂಜಗಿ. ಉಮಾ ನಾವಲಗಿ. ಮುಂತಾದವರು ಆಗಮಿಸಲಿದ್ದಾರೆಂದು ಕಸಾಪ ಗೌರವ ಕೋಶಾಧ್ಯಕ ಸಂಗಮೇಶ ಮೇತ್ರಿ ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

**Printed by:** AVINASH BIDARI, **Published and Onwed by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR